# ಜನತಾವಾಣಿ


ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಬುಧವಾರ, ಅಕ್ಟೋಬರ್ 23, 2024

ಸಂಪುಟ : 51 ಸಂಚಿಕೆ : 160 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com





ದಾವಣಗೆರೆ ಜಿಲ್ಲಾ ಮಾದಿಗ-ಛಲವಾದಿ ಸಮುದಾಯಗಳ ಒಕ್ಕೂಟ

ಸುಪ್ರೀಂ ಕೋರ್ಟ್ ತೀರ್ಪಿನ ಆದೇಶದ ಅನ್ವಯ ಒಳ-ಮೀಸಲಾತಿ ಜಾರಿಗೆ ಒತ್ತಾಯಿಸಿ

"ಬೃಹತ್ ಪ್ರತಿಭಟನೆ"

ದಿನಾಂಕ: 23-10-2024, ಸಮಯ: ಬೆಳಿಗ್ಗೆ 10.00ಕ್ಕೆ
ಸ್ಥಳ: ಡಾ. ಬಿ.ಆರ್. ಅಂಬೇಡ್ಕರ್ ಸರ್ಕಲ್, ದಾವಣಗೆರೆ

ಬನ್ನಿ... ಭಾಗವಹಿಸಿ.... ಯಶಸ್ವಿಗೊಳಿಸಿ....

ಕೆ.ಎಸ್. ಗೋವಿಂದರಾಜ್
ಅಧ್ಯಕ್ಷರು, ಮಹಾನಗರಪಾಲಿಕೆ ನೌಕರರ ಸಂಘ (ರಿ.)




ಹದಡಿ ಕೆರೆ



ದಾವಣಗೆರೆ ತಾಲ್ಲೂಕು ಹದಡಿ ಕೆರೆ ಕೋಡಿ ಬಿದ್ದಿರುವ ವಿಹಂಗಮ ನೋಟ. ಚಿತ್ರ: ರಫೀಕ್, ಜನತಾವಾಣಿ

## ಮಳೆ ಅನಾಹುತಗಳಿಗೆ ಪರಿಹಾರ ನೀಡಲು ಸಿದ್ಧತೆ : ಸಿದ್ದರಾಮಯ್ಯ

ಬೆಂಗಳೂರು, ಅ. 22- ಮಳೆ ಅನಾಹುತ ವರದಿ ತರಿಸಿಕೊಂಡಿದ್ದೇವೆ, ಭಾರೀ ಮಳೆಯಿಂದ ಆಗಿರುವ ಅನಾಹುತಗಳಿಗೆ ಪರಿಹಾರ ನೀಡಲು ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಳೆ ಅನಾಹುತಗಳ ಕುರಿತು ನಿಗಾ ವಹಿಸಲಾಗಿದೆ, ಸ್ಥಳ ಸಮೀಕ್ಷೆ ನಡೆಯುತ್ತಿದೆ, ಪರಿಹಾರ ನೀಡಲು ಸಕಲ ಸಿದ್ಧತೆ ನಡೆದಿದೆ ಎಂದರು.

ಚನ್ನಪಟ್ಟಣ ಮಾಜಿ ಶಾಸಕ ಸಿ.ಪಿ. ಯೋಗೀಶ್ವರ್ ಸೇರಿದಂತೆ ಕಾಂಗ್ರೆಸ್ ಸಿದ್ಧಾಂತ ಮತ್ತು ಸಂವಿಧಾನ ಮೌಲ್ಯಗಳನ್ನು ಒಪ್ಪಿ ಬರುವ ಎಲ್ಲರಿಗೂ ಪಕ್ಷಕ್ಕೆ ಸ್ವಾಗತವಿದೆ ಎಂದವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. (2ನೇ ಪುಟಕ್ಕೆ)

# ಭವಿಷ್ಯದ ದಿನಗಳು ಬಂಗಾರ

## ತುಪ್ಪದಹಳ್ಳಿ ಕೆರೆಗೆ ಬಾಗಿನ ಅರ್ಪಿಸಿದ ತರಳಬಾಳು ಶ್ರೀ



ಜಗಳೂರು, ಅ.22- ಬರದ ನಾಡಿಗೆ ದೈವ ಕೃಪೆ ಮತ್ತು ಮಾನವ ಪ್ರಯತ್ನದಿಂದ ಜಗಳೂರು, ಭರಮಸಾಗರ ಅವಳಿ ಯೋಜನೆಗಳ ಮೂಲಕ ಕೆರೆಗಳಿಗೆ ನೀರು ಹರಿಯುತ್ತಿದ್ದು, ಭವಿಷ್ಯದ ದಿನಗಳು ಬಂಗಾರವಾಗಲಿವೆ ಎಂದು ತರಳಬಾಳು ಶ್ರೀ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಆಶಯ ವ್ಯಕ್ತಪಡಿಸಿದರು.

ತಾಲ್ಲೂಕಿನ ತುಪ್ಪದಹಳ್ಳಿ ಕೆರೆಗೆ ಇಂದು ಬಾಗಿನ ಅರ್ಪಿಸಿ ವೇದಿಕೆ ಕಾರ್ಯಕ್ರಮದಲ್ಲಿ ಶ್ರೀಗಳು ಆಶೀರ್ವಚನ ನೀಡಿದರು.

ಜಗಳೂರು ಕ್ಷೇತ್ರದ 57 ಕೆರೆಗಳು, ಭರಮಸಾಗರದ ವ್ಯಾಪ್ತಿಯ ಕೆರೆಗಳು ನದಿಯ ರೀತಿಯಲ್ಲಿ ತುಂಬಿ ಹರಿಯುತ್ತಿವೆ. ಮೊಬೆಲ್ ನೆಟ್ ವರ್ಕ್ ತರ ನೀರನ ನೆಟ್ ವರ್ಕ್ ಇದೆ. ಶಾಂತಿವನ ಕೋಡಿ ಬಿದ್ದರೆ, ಭರಮಸಾಗರ ಕೆರೆ, ಭರಮಸಾಗರ ಕೆರೆ ತುಂಬಿದರೆ, ತುಪ್ಪದಹಳ್ಳಿಕೆರೆ, ತುಪ್ಪದಹಳ್ಳಿ ಕೆರೆ ತುಂಬಿದ ನಂತರ ಜಗಳೂರು, ಹರಪನಹಳ್ಳಿ ತಾಲ್ಲೂಕಿನ ಮಾರ್ಗದಿಂದ ಟಿ.ಬಿ. ಡ್ಯಾಂಗೆ ನೀರು ಹರಿದು ಹೋಗುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.

ದಾವಣಗೆರೆ ತಾಲ್ಲೂಕಿನ 22 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಹೊಸ ಪೈಪ್‌ಲೈನ್ ಯೋಜನೆಗೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಮೂಲಕ ಸರಕಾರಕ್ಕೆ ಪ್ರಸ್ತಾವನೆ (2ನೇ ಪುಟಕ್ಕೆ)

# ಯೋಗೇಶ್ವರ್‌ಗೆ ಬೇಡಿಕೆ



ಬೆಂಗಳೂರು, ಅ. 22 - ವಿಧಾನ ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಚನ್ನಪಟ್ಟಣ ವಿಧಾನಸಭಾ ಉಪಚುನಾವಣಾ ಕಣಕ್ಕಿಳಿಯಲು ಮುಂದಾಗಿರುವ ಮಾಜಿ ಸಚಿವ, ಬಿಜೆಪಿ ಮುಖಂಡ ಸಿ.ಪಿ.ಯೋಗೇಶ್ವರ್ ಅವರಿಗೆ ಈಗ ಎಲ್ಲಿಲ್ಲದ ಬೇಡಿಕೆ ಬಂದಿದೆ.

ಚನ್ನಪಟ್ಟಣ ಕ್ಷೇತ್ರವನ್ನು ಎನ್‌ಡಿಎ ತೆಕ್ಕೆಯಲ್ಲಿ ಉಳಿಸಿಕೊಳ್ಳಲು ಬಿಜೆಪಿ ಒಂದೆಡೆ ನಿರಂತರ ಪ್ರಯತ್ನ ಮಾಡಿದರೆ, ಇನ್ನೊಂದೆಡೆ ಕಾಂಗ್ರೆಸ್, ಯೋಗೇಶ್ವರ್ ಅವರನ್ನು ಮತ್ತೆ ಮನೆಗೆ ಕರೆತರಲು ಮುಂದಾಗಿದೆ.

ಇದರ ನಡುವೆ ಚನ್ನಪಟ್ಟಣ ಕ್ಷೇತ್ರ ಉಳಿಸಿಕೊಂಡು ತನ್ನ ಅಸ್ತಿತ್ವ ಕಾಪಾಡಿಕೊಳ್ಳಲು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಇಡೀ ದಿನ ಕ್ಷೇತ್ರದ ಕಾರ್ಯಕರ್ತರೊಂದಿಗೆ ಸಮಾಲೋಚನೆ ನಡೆಸಿದರು.

ಸಭೆ ನಡುವೆಯೇ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಹಾಗೂ ಕೇಂದ್ರ ಸಚಿವ ಜೆ.ಪಿ.ನಡ್ಡ, ತಮ್ಮ ಸಹೋದ್ಯೋಗಿ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಎರಡು ಬಾರಿ ದೂರವಾಣಿ ಮೂಲಕ ಸಂಪರ್ಕಿಸಿ, ಜೆಡಿಎಸ್ ಚಿನ್ಹೆಯಡಿ ಯೋಗೇಶ್ವರ್ ಸ್ಪರ್ಧೆಗೆ ನಿಮ್ಮ ಸಹಮತ ಇದೆಯೇ ಎಂದು ಕೇಳಿದ್ದಾರೆ. ಆದರೆ, ಸಭೆಯಲ್ಲಿ ಜೆಡಿಎಸ್ ಕಾರ್ಯಕರ್ತರು ಯೋಗೇಶ್ವರ್ ಸ್ಪರ್ಧೆಗೆ ವಿರೋಧ ವ್ಯಕ್ತಪಡಿಸಿದ್ದಲ್ಲದೆ, ನಿಖಿಲ್ ಕುಮಾರಸ್ವಾಮಿ ಅಥವಾ ಕುಟುಂಬದ ಯಾರನ್ನಾದರೂ ಕಣಕ್ಕಿಳಿಸಿ ಎಂದು ಒತ್ತಾಯ ಮಾಡಿದ್ದಾರೆ.

ಇದರಿಂದ ಇಕ್ಕಟ್ಟಿಗೆ ಸಿಲುಕಿದ ಕುಮಾರಸ್ವಾಮಿ, ನಡ್ಡ ಅವರ ಸಲಹೆಗೆ ಒಪ್ಪಿದ್ದರೂ ಅದಕ್ಕೆ ಇನ್ನೂ ಅಂತಿಮ ಚಿತ್ರಣ ದೊರೆತಿಲ್ಲ.

ಇತ್ತ ಯೋಗೇಶ್ವರ್ ಮಾತ್ರ ನಾನು ಬಿಜೆಪಿ ಚಿನ್ಹೆಯಡಿ ಕಣಕ್ಕಿಳಿಯುವುದಾದರೆ ಒಪ್ಪಿಗೆ, ಇಲ್ಲದಿದ್ದರೆ ನನ್ನ ದಾರಿ ನನಗೆ ಎಂದು ರಾಜ್ಯ ನಾಯಕರಿಗೆ ತಮ್ಮ ಗಟ್ಟಿ ನಿರ್ಧಾರವನ್ನು ಹೇಳುತ್ತಲೇ ಬಂದಿದ್ದಾರೆ. ಮತ್ತೊಂದೆಡೆ ಯೋಗೇಶ್ವರ್ ಅವರನ್ನು ಪಕ್ಷಕ್ಕೆ ಬರಮಾಡಿಕೊಳ್ಳಲು ರಾಜ್ಯ ಉಸ್ತುವಾರಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ (2ನೇ ಪುಟಕ್ಕೆ)

# ಜಾತಿ ಗಣತಿ: ವೈಜ್ಞಾನಿಕ ಸಮೀಕ್ಷೆಗೆ ವೀರಶೈವ ಮಹಾಸಭಾದ ಆಗ್ರಹ

ಬೆಂಗಳೂರು, ಅ.22- ಜಾತಿ ಗಣತಿಗೆ ಹೊಸದಾಗಿ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಬೇಕು ಎಂದು ಇಂದಿಲ್ಲಿ ರ್‍ಯಾಡಿಷನ್ ಬ್ಲೂ (ಏಟ್ರಿಯಾ) ಹೋಟೆಲ್ ಸಭಾಂಗಣದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ನಡೆಸಿದ ಸಭೆಯಲ್ಲಿ ವೀರಶೈವ ಲಿಂಗಾಯತ ಸಮಾಜದ ಮುಖಂಡರು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಅಖಿಲ ಭಾರತ ವೀರಶೈವ - ಲಿಂಗಾಯತ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರ ನೇತೃತ್ವದಲ್ಲಿ ಏರ್ಪಾಡಾಗಿದ್ದ ಈ ಸಭೆಯಲ್ಲಿ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ (2ನೇ ಪುಟಕ್ಕೆ)



## ಒಂದು ರೂಪಾಯಿ ಲಂಚ ಪಡೆದಿಲ್ಲ



ಬೆಂಗಳೂರು, ಅ. 22 - ವರುಣಾ ಕ್ಷೇತ್ರದ ಜನರ ಆಶೀರ್ವಾದ ದಿಂದ ಎರಡು ಬಾರಿ ಮುಖ್ಯಮಂತ್ರಿ ಆಗಿದ್ದು, ಒಂದೇ ಒಂದು ರೂಪಾಯಿ ಲಂಚ ಪಡೆದ ಉದಾಹರಣೆ ನನ್ನ ಮೇಲೆ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮರ್ಥಿಸಿಕೊಂಡಿದ್ದಾರೆ. ರಾಜ್ಯದ ಜನತೆ ನನ್ನ ಜೊತೆಗೆ ಇರುವವರೆಗೂ ನಾನು ಬಿಜೆಪಿ- ಜೆಡಿಎಸ್ ಷಡ್ಯಂತ್ರಕ್ಕೆ ಹೆದರುವುದಿಲ್ಲ. ಎಲ್ಲಾ ಷಡ್ಯಂತ್ರ ಸೋಲಿಸುತ್ತೇನೆ. ಅವರ ಆಟಗಳಿಗೆ ಜಗ್ಗಲ್ಲ, ಬಗ್ಗಲ್ಲ.

ಸಾಮಾಜಿಕ ನ್ಯಾಯದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ನನ್ನ ಮೇಲಿನ ಲಂಚದ ಸುಳ್ಳು ಆರೋಪ ವನ್ನು ಜನತೆ ಸಹಿಸುವುದಿಲ್ಲ. ರಾಜ್ಯದ ಜನತೆ ನನ್ನ ಜೊತೆಗೆ ಇರುವವರೆಗೂ ಷಡ್ಯಂತ್ರಗಳಿಗೆ ಹೆದರಲ್ಲ ಎಂದವರು ಹೇಳಿದ್ದಾರೆ.


MEETAKSHARA
Lifestyle Exhibition
DEEPAVALI & WEDDING EDIT
23rd October, 2024
Hotel Southern Star
Shamanur Road, Kuvempu Nagar
Davanagere-577004.
Exciting EARLY BIRD PRIZE LUCKY DIP
- 1st Prize - Saree worth Rs. 5000/-
- 2nd Prize - Saree worth Rs. 3000/-
- 3rd Prize - Saree worth Rs. 2000/-

Hurry!! Don't miss out on this exclusive showcase!


# ಆಸ್ತಿ ನೋಂದಣಿಗೆ ಹಲವು ಕಂಟಕ... ಜನರಿಗೆ ಸಂಕಟ

## ಆಧಾರ್ ತಿದ್ದುಪಡಿ, ಇ-ಸ್ವತ್ತು ವಿಳಂಬ, ಇದೀಗ ನೋಂದಣಿ ಸ್ಥಗಿತ: ಜನತೆ ಹೈರಾಣ

- ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ

ದಾವಣಗೆರೆ: ರಾಜ್ಯಾದ್ಯಂತ ಉಪನೋಂದಣಾಧಿಕಾರಿ ಕಚೇರಿಗಳಲ್ಲಿ ಆಸ್ತಿ ಸೇರಿದಂತೆ ಎಲ್ಲ ರೀತಿಯ ದಸ್ತಾವೇಜುಗಳ ನೋಂದಣಿ ಸ್ಥಗಿತಗೊಳಿಸಿರುವ ಹಿನ್ನೆಲೆಯಲ್ಲಿ ಸದಾ ಜನರಿಂದ ತುಂಬಿರುತ್ತಿದ್ದ ದಾವಣಗೆರೆ ಪಿ.ಬಿ. ರಸ್ತೆಯಲ್ಲಿರುವ ಉಪ ನೋಂದಣಾಧಿಕಾರಿ ಕಚೇರಿಯೂ ಬಣಗುಡುತ್ತಿದೆ.

'ನೋಂದಣಿ ಕಾಯ್ದೆ 1908ರಲ್ಲಿ 22ಬಿ ಹೊಸ ಸೆಕ್ಷನ್ ಪರಿಚಯಿಸುವುದರಿಂದ ಕೇಂದ್ರ ಕಚೇರಿಯಿಂದ ಸರಿಯಾದ ನಿರ್ದೇಶನಗಳು ಬರುವವರೆಗೂ ದಸ್ತಾವೇಜುಗಳ ಪರಿಶೀಲನೆಯನ್ನು ಅನಿರ್ದಿಷ್ಟಾವಧಿ ವರೆಗೆ ಮುಂದೂಡುತ್ತಿದ್ದೇವೆ' ಎಂದು ನೋಂದಣಾಧಿಕಾರಿ ಕಚೇರಿಯಲ್ಲಿ ಚಿಕ್ಕದಾಗಿ ಬೋರ್ಡ್ ಹಾಕಲಾಗಿದೆ.

ಕಳೆದ ಶುಕ್ರವಾರ ಹಾಗೂ ಶನಿವಾರ ಅರ್ಜಿ ಸಲ್ಲಿಸಿದ್ದ ಆಸ್ತಿಗಳು ಮಾತ್ರ ಸೋಮವಾರ ನೋಂದಣಿಯಾಗಿದೆ.

ಪ್ರತಿ ದಿನ 100 ರಿಂದ 130 ನೋಂದಣಿಗಳು ನಡೆಯುತ್ತಿದ್ದ ಈ ಕಚೇರಿಯು, ಬೆಳಿಗ್ಗೆಯಿಂದಲೇ ಆಸ್ತಿ ಕೊಳ್ಳುವವರು ಹಾಗೂ ಕೊಡುವವರಿಂದ ತುಂಬಿಕೊಂಡಿರುತ್ತಿತ್ತು. ಆದರೆ ನೋಂದಣಿ ಸ್ಥಗಿತ ವಿಷಯ ತಿಳಿದಿದ್ದರಿಂದ ಯಾರೂ ಇತ್ತ ಸುಳಿದಿಲ್ಲ. ಸದಾ ಬ್ಯುಸಿಯಾಗಿರುತ್ತಿದ್ದ ಕಚೇರಿ ಸಿಬ್ಬದಿಗಳು, ಪತ್ರ ಬರಹಗಾರು ಇಂದು ಯಾವುದೇ ಒತ್ತಡವಿಲ್ಲದೆ ತಮ್ಮ ಅಳಿದುಳಿದ ಕಾರ್ಯಗಳಲ್ಲಿ ಮಗ್ನರಾಗಿದ್ದರು.

ಆಸ್ತಿ ಖರೀದಿ ಹಾಗೂ ಮಾರಾಟದಲ್ಲಿ ಮೋಸ, ವಂಚನೆಯಾಗದಂತೆ ತಡೆಗಟ್ಟಲು ರಾಜ್ಯ ಸರ್ಕಾರ ಇ-ಖಾತೆ ಕಡ್ಡಾಯ ಮಾಡಿತ್ತಾದರೂ, (2ನೇ ಪುಟಕ್ಕೆ)



> **ಕಡ್ಡಾಯವಾಗಿ ನೋಂದಣಿ ಸ್ಥಗಿತವಾಗಿಲ್ಲ. ನೂತನ ಕಾಯ್ದೆ ಕುರಿತು ಕೇಂದ್ರ ಇಲಾಖೆಯಿಂದ ಸ್ಪಷ್ಟನೆ ಕೇಳುತ್ತಿದ್ದೇವಷ್ಟೇ.**
> - ವೀಣಾ ಆರ್.ಎಲ್.,
> ಉಪ ನೋಂದಣಾಧಿಕಾರಿ

## ಮಹಾನಗರ ಪಾಲಿಕೆಯಿಂದ ಇ-ಸ್ವತ್ತು ವಿಳಂಬದಿಂದ ನೋಂದಣಿಗೆ ಹಿನ್ನಡೆ ?

ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 1.75 ಲಕ್ಷ ಸ್ವತ್ತುಗಳಿದ್ದು, ಈ ಪೈಕಿ ಇಲ್ಲಿಯವರೆಗೆ 45 ಸಾವಿರ ಆಸ್ತಿಗಳನ್ನು ಡಿಜಿಟಲೀಕರಣ ಮಾಡಲಾಗಿದೆ.

ಪಾಲಿಕೆಯಲ್ಲಿ ಇ-ಸ್ವತ್ತು ಕೊಟ್ಟ ನಂತರವೇ ಸಬ್ ರೆಜಿಸ್ಟ್ರಾರ್ ಕಚೇರಿಯಲ್ಲಿ ನೋಂದಣಿ ಮಾಡಲಾಗುತ್ತಿದೆ. ಆದರೆ ಇ-ಸ್ವತ್ತು ಕಡ್ಡಾಯ ಹಾಗೂ ವಿಳಂಬದ ಕಾರಣ ಶೇ.30ರಷ್ಟು ನೋಂದಣಿ ಕಾರ್ಯ ಕುಸಿತ ಕಂಡಿದೆ ಎಂದು ಸ್ವತಃ ಪತ್ರ ಬರಹಗಾರರೇ ಹೇಳುತ್ತಿದ್ದಾರೆ.

ಸರ್ವರ್ ಸಮಸ್ಯೆ ಹಾಗೂ ಸರಿಯಾದ ದಾಖಲೆಗಳಿಲ್ಲ ಎಂಬ ನೆಪ ಮುಂದಿಟ್ಟುಕೊಂಡು ಕೆಲವು ಅಧಿಕಾರಿಗಳು ಇ-ಸ್ವತ್ತು ಕೊಡಲು, ಲಂಚಕ್ಕಾಗಿ ಒತ್ತಾಯಿಸುತ್ತಿರುವ ಆರೋಪ ಬಲವಾಗಿಯೇ ಕೇಳಿಬಂದಿದೆ.

ಇ-ಸ್ವತ್ತು ಮಾಡಲು ಅರ್ಜಿ ಸಲ್ಲಿಸಿದರೆ ಹತ್ತಿಪ್ಪತ್ತು ದಾಖಲೆಗಳನ್ನು ಕೇಳುತ್ತಾರೆ. ಹತ್ತಾರು ಬಾರಿ ಓಡಾಡಿಸುತ್ತಾರೆ. ಇದರಿಂದ ಸಾಕಾಗಿ ಹೋಗಿದೆ. (2ನೇ ಪುಟಕ್ಕೆ)

> **ಕಳೆದೊಂದು ವರ್ಷದಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ 45 ಸಾವಿರ ಆಸ್ತಿಗಳನ್ನು ಡಿಜಿಟಲೀಕರಣ ಮಾಡಲಾಗಿದೆ. ಇ-ಸ್ವತ್ತು ಕೊಡಲು ಸರ್ವರ್ ಸಮಸ್ಯೆ ಇರುತ್ತದೆ. ಅಲ್ಲದೆ, ಅರ್ಜಿದಾರರು ಪ್ರಸಕ್ತ ವರ್ಷದ ತೆರಿಗೆ ನವೀಕರಣ ಮಾಡಿರಬೇಕು. ಕಟ್ಟಡ ಪರವಾನಗಿ, ಲೇ ಔಟ್ ಅಪ್ರೂವಲ್, ಇಸಿ ಸೇರಿದಂತೆ ಇತರೆ ದಾಖಲೆಗಳನ್ನು ಕೊಡಬೇಕು. ಸಮರ್ಪಕ ದಾಖಲೆಗಳನ್ನು ಕೊಡದ ಕಾರಣ ಕೆಲವರಿಗೆ ಇ ಸ್ವತ್ತು ಸಿಗುವುದಿಲ್ಲ. ಅಲ್ಲದೆ ಹೆಚ್ಚಾಗಿ ಅರ್ಜಿಗಳು ಬರುತ್ತಿರುವುದೂ ಸಹ ವಿಳಂಬಕ್ಕೆ ಕಾರಣವಾಗಿದೆ.**
> - ರೇಣುಕಾ, ಆಯುಕ್ತರು,
> ಮಹಾನಗರ ಪಾಲಿಕೆ.

## ಅಮರತಿಬಾಯಿ ನಿಧನ



ದಾಣಗೆರೆ ಸಿಟಿ, ಶ್ರದ್ಧಾ ಅಪಾರ್ಟ್‌ಮೆಂಟ್ ಪಿ.ಜೆ. ಬಡಾವಣೆ ವಾಸಿ,
ಪನ್ನಾಲಾಲ್‌ಜಿರವರ ಧರ್ಮಪತ್ನಿ

**ಅಮರತಿಬಾಯಿ**

ಇವರು ದಿನಾಂಕ 22.10.2024ರ ಮಂಗಳವಾರ ಸಂಜೆ 7ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 78 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 23.10.2024ರ ಬುಧವಾರ ಬೆಳಿಗ್ಗೆ 9.30ಕ್ಕೆ ಜೈನರ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

: ದುಃಖತಪ್ತರು :

ಕೀರ್ತಿ ಎಂಟರ್‌ಪ್ರೈಸಸ್, ಅರಿಹಂತ ಎಂಟರ್‌ಪ್ರೈಸಸ್, ಎಂ.ಪಿ. ಹಾರ್ಡ್‌ವೇರ್ಸ್, ಎಂ.ಪಿ. ಎಲೆಕ್ಟ್ರಿಕಲ್ಸ್, ಮಹಾಲಕ್ಷ್ಮಿ ಸ್ಯಾನಿಟರಿವೇರ್, ಅನೂಪ ಟೈಲ್ಸ್ ಅಂಡ್ ಟ್ಯಾಪ್ಸ್, ದಾವಣಗೆರೆ.

# ದೃಶ್ಯಂ ಮಾದರಿಯಲ್ಲಿ ಹತ್ಯೆ : ಸೈನಿಕನ ಬಂಧನ

ನಾಗಪುರ, ಅ. 22 - ತನ್ನ ಗೆಳತಿಯನ್ನು ಹತ್ಯೆಗೈಯ್ದು, ದೃಶ್ಯಂ ಚಲನಚಿತ್ರದ ಮಾದರಿಯಲ್ಲಿ ಮೃತದೇಹವನ್ನು ಸಿಮೆಂಟ್‌ನಲ್ಲಿ ಹೂತಿಟ್ಟ ಆರೋಪದ ಮೇಲೆ ಸೈನಿಕನೋರ್ವನನ್ನು ನಾಗಪುರ ಪೊಲೀಸರು ಬಂಧಿಸಿದ್ದಾರೆ.

ಆಗಸ್ಟ್ 28 ರಂದು ಹತ್ಯೆಗೀಡಾದ ಮಹಿಳೆ ಕಾಣೆಯಾಗಿದ್ದಳು. ನಂತರ ಈ ಬಗ್ಗೆ ತನಿಖೆ ಆರಂಭಿಸಲಾಗಿತ್ತು. ತನಿಖೆಯ ವೇಳೆ ವಂಚನೆ, ಮೋಸ ಹಾಗೂ ಹತ್ಯೆಯ ಘೋರ ಕೃತ್ಯ ಬೆಳಕಿಗೆ ಬಂದಿದೆ.

ದೃಶ್ಯಂ ಚಲನಚಿತ್ರದಲ್ಲಿ ಆರೋಪಿ ಅತ್ಯಂತ ಯೋಜಿತವಾಗಿ ಹತ್ಯೆಯನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಸಿದ್ದ. ಈ ಪ್ರಕರಣ ಸಹ ಅದೇ ರೀತಿ ಇದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

33 ವರ್ಷದ ಆರೋಪಿ ಅಜಯ್ ವಾಂಖೆಡೆ ನಾಗಪುರದ ಕೈಲಾಸ್ ನಗರದ ನಿವಾಸಿ. ಆತ ನಾಗಾಲ್ಯಾಂಡ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ. ಆತ ಮದುವೆಯ ಪೋರ್ಟಲ್ ಮೂಲಕ ವಿಚ್ಛೇದಿತ ಮಹಿಳೆ ಜ್ಯೋತ್ಸನಾ ಆಕರೆ ಸಂಪರ್ಕಕ್ಕೆ ಬಂದಿದ್ದ. ಅವರ ಸ್ನೇಹ ನಂತರ ಪ್ರೇಮವಾಗಿ ಪರಿವರ್ತನೆಯಾಗಿತ್ತು.

ಆದರೆ, ವಾಂಖೆಡೆ ಕುಟುಂಬದವರು ಈ ಸಂಬಂಧ ಹಾಗೂ ಮದುವೆ ವಿರೋಧಿಸಿದ್ದರು. ನಂತರ ಬೇರೆ ಹುಡುಗಿಯ ಜೊತೆ ವಾಂಖೆಡೆ ಮದುವೆ ನೆರವೇರಿತು.

ನಂತರದಲ್ಲಿ ವಾಂಖೆಡೆಯು ಆಕ್ರೆ ಕಡೆಗಣಿಸಿದ್ದ. ಆದರೆ, ಆಕ್ರೆ, ಆತನನ್ನು ಹುಡುಕಿಕೊಂಡು ಬಂದಿದ್ದಳು. ಇದರಿಂದಾಗಿ ವಾಂಖೆಡೆ ಆತಂಕಗೊಂಡಿದ್ದ.

ಈ ಸಂಬಂಧ ಸಂಪೂರ್ಣವಾಗಿ ಕಡಿದುಕೊಳ್ಳಲು ಹತ್ಯೆಗೆ ಸಂಚು ನಡೆಸಿದ್ದ. ಮಂಪರು ಬರಿಸುವ ಮದ್ದನ್ನು ಆಕ್ರೆಗೆ ನೀಡಿದ್ದ ಆತ, ನಂತರ ಕತ್ತು ಹಿಸುಕಿ ಹತ್ಯೆಗೈದಿದ್ದ. ನಾಗಪುರ ಜಿಲ್ಲೆಯ ನಿರ್ಜನ ಪ್ರದೇಶದಲ್ಲಿ ದೇಹವನ್ನು ಹೂತು ಹಾಕಿದ್ದ. ಅಪರಾಧ ಮುಚ್ಚಿ ಹಾಕಲು ದೇಹದ ಮೇಲೆ ಸಿಮೆಂಟ್ ಸಹ ಸುರಿದಿದ್ದ.

ನಂತರ ಆಕ್ರೆ ಮೊಬೈಲ್ ಫೋನ್ ಅನ್ನು ವಾರ್ಧಾ ರಸ್ತೆಯಲ್ಲಿ ಸಾಗುತ್ತಿದ್ದ ಲಾರಿಯೊಂದರಲ್ಲಿ ಎಸೆದಿದ್ದ. ಆಕ್ರೆ ಕಣ್ಮರೆಯಾದ ಕಾರಣ ಆತಂಕಗೊಂಡ ಅವರ ಕುಟುಂಬದವರು, ಆಗಸ್ಟ್ 29ರಂದು ಬೆಲ್ಟರೊಡಿ ಪೊಲೀಸರಿಗೆ ದೂರು ನೀಡಿದ್ದರು. ಸೆಪ್ಟೆಂಬರ್ 17ರಂದು ಅಪಹರಣ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು.

ತನಿಖೆ ನಡೆಸಿದ ಪೊಲೀಸರಿಗೆ, ವಾಖಂಡೆ ಹಾಗೂ ಆಕ್ರೆ ನಡುವೆ ನಿಯಮಿತ ದೂರವಾಣಿ ಸಂಪರ್ಕ ಇದ್ದದ್ದು ಕಂಡು ಬಂತು. ವಾಂಖೆಡೆ ವಿಚಾರಣೆ ನಡೆಸಿದಾಗ ಇಡೀ ಪ್ರಕರಣ ಬೆಳಕಿಗೆ ಬಂದಿದೆ. ಪೊಲೀಸರು ಸೋಮವಾರ ವಾರ್ಧಾ ರಸ್ತೆಯ ಬಳಿ ಹೂತಿದ್ದ ಆಕ್ರೆ ಮೃತದೇಹವನ್ನು ಹೊರಕ್ಕೆ ತೆಗೆದಿದ್ದಾರೆ.

# ಒಳ ಮೀಸಲಾತಿಗಾಗಿ ಆಗ್ರಹಿಸಿ ಇಂದಿನ ಪ್ರತಿಭಟನೆಯ ಯಶಸ್ವಿಗೆ ಹರಿಹರದ ಸಮುದಾಯ ಕರೆ




ಹರಿಹರ, ಅ.22- ದಾವಣಗೆರೆ ನಗರದಲ್ಲಿ ಜಿಲ್ಲಾ ಮಾದಿಗ ಮತ್ತು ಛಲವಾದಿ ಸಮುದಾಯಗಳ ಒಕ್ಕೂಟದ ವತಿಯಿಂದ ಸುಪ್ರೀಂ ಕೋರ್ಟ್ ಒಳ ಮೀಸಲಾತಿ ತೀರ್ಪನ್ನು ಜಾರಿಗೊಳಿಸಲು ಆಗ್ರಹಿಸಿ ನಾಳೆ ದಿನಾಂಕ 23 ರ ಬುಧವಾರ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದು, ಪ್ರತಿಭಟನೆಯಲ್ಲಿ, ಹರಿಹರ ತಾಲ್ಲೂಕಿನಿಂದ 2 ಸಾವಿರಕ್ಕೂ ಹೆಚ್ಚು ಮಾದಿಗ ಮತ್ತು ಛಲವಾದಿ ಸಮುದಾಯದ ಜನರು ಪಾಲ್ಗೊಂಡು ಯಶಸ್ವಿಯಾಗಿಸುವಂತೆ ಹರಿಹರ ತಾಲ್ಲೂಕು ಮಾದಿಗ ಸಮಾಜದ ಯುವ ಪಡೆಯ ಮುಖಂಡ ಎನ್.ಮಹೇಶ್ ಕುಮಾರ್ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಸಂವಿಧಾನದ ಪ್ರಧಾನ ಆಶಯವಾಗಿರುವ ಸಾಮಾಜಿಕ ನ್ಯಾಯವನ್ನು ಖಾತರಿಪಡಿಸುವ ಉದ್ದೇಶದಿಂದ ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ ಉದ್ಯೋಗ ಹೀಗೆ ಸಾರ್ವಜನಿಕ ಜೀವನದ ಎಲ್ಲಾ ರಂಗಗಳಲ್ಲಿ ಸಮರ್ಪಕ ಪ್ರಾತಿನಿಧ್ಯ ತತ್ವವನ್ನು ಅಳವಡಿಸಿ, ಮೀಸಲಾತಿ ಸೌಲಭ್ಯವನ್ನು ಶಾಸನಬದ್ಧವಾಗಿ ಜಾರಿಗೆ ತರಲಾಗಿದೆ. ಆದರೆ, ಕಾಲಾಂತರದಲ್ಲಿ ಅಸ್ಪೃಶ್ಯ ಜಾತಿಗಳನ್ನು ಸ್ಪೃಶ್ಯ ಜಾತಿಗಳ ಪಟ್ಟಿಯಲ್ಲಿ ಸೇರಿಸಿದ್ದರಿಂದ ಮೀಸಲಾತಿ ನೀತಿಯ ಮೂಲ ಉದ್ದೇಶವೇ ವಿಫಲಗೊಂಡಿತು.

ಇದರಿಂದಾಗಿ ನೊಂದ ಮಾದಿಗ ಸಮುದಾಯವು ವೈಜ್ಞಾನಿಕ ಸ್ವರೂಪದ ಆಂತರಿಕ ಮೀಸಲಾತಿಗಾಗಿ ಕಳೆದ 30 ವರ್ಷಗಳಿಂದ ಪ್ರತಿಭಟನೆ ಮಾಡುತ್ತಾ ಕಾನೂನು ಹೋರಾಟವನ್ನು ಮಾಡುತ್ತಾ ಬಂದ ಪರಿಣಾಮ, ಕರ್ನಾಟಕ ಸರ್ಕಾರ ನ್ಯಾ. ಎ.ಜೆ.ಸದಾಶಿವ ಆಯೋಗವನ್ನು ರಚಿಸಿ, ವರದಿಯನ್ನು ಪಡೆದು ತದನಂತರ ಸಂಪುಟದ ಉಪ ಸಮಿತಿಯ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿತು.

ವೈಜ್ಞಾನಿಕ ದತ್ತಾಂಶಗಳ ಆಧಾರದ ಮೇಲೆ ಒಳ ಮೀಸಲಾತಿ ನೀಡಬೇಕೆಂದು ಸುಪ್ರೀಂ ಕೋರ್ಟ್ ಸೂಚಿಸಿದ್ದು, ಆದ್ದರಿಂದ ಸರ್ಕಾರ ಇನ್ನೂ ಹೆಚ್ಚಿನ ವಿಳಂಬ ತೋರದೇ ಒಳ ಮೀಸಲಾತಿ ಅನುಷ್ಠಾನಗೊಳಿಸಲು ಮುಂದಾಗುವಂತೆ ಅವರು ಆಗ್ರಹಿಸಿದರು.

> **ದಾವಣಗೆರೆಯಲ್ಲಿನ ಪ್ರತಿಭಟನೆಗೆ ಹರಿಹರ ತಾಲ್ಲೂಕಿನಿಂದ 2 ಸಾವಿರಕ್ಕೂ ಹೆಚ್ಚು ಮಾದಿಗ ಮತ್ತು ಛಲವಾದಿ ಸಮುದಾಯದ ಜನರು ಪಾಲ್ಗೊಳ್ಳುವಿಕೆ.**
>
> **-ಎನ್. ಮಹೇಶ್ ಕುಮಾರ್,**
> ಹರಿಹರ ತಾಲ್ಲೂಕು ಮಾದಿಗ ಸಮಾಜದ ಯುವ ಪಡೆಯ ಮುಖಂಡ

ಈ ಸಂದರ್ಭದಲ್ಲಿ ವಿಕ್ರಮ್ ಎಂ.ದೊಡ್ಡಮನಿ, ಹೆಚ್.ಸಾಗರ್, ವೈ.ಮಹೇಶ್, ಶ್ರೀಕಾಂತ್, ಮಹೇಶ್ ಕುಮಾರ್ ಎನ್, ಷಣ್ಮುಖ, ಮಂಜುನಾಥ್, ಜೆ.ಆಕಾಶ್, ಬಸವರಾಜ್ ಇತರರು ಹಾಜರಿದ್ದರು.

# ವೀರಭದ್ರೇಶ್ವರ ದೇವಸ್ಥಾನಕ್ಕೆ ಕಾಶಿ ಜಗದ್ಗುರುಗಳ ಭೇಟಿ



**ಮಲೇಬೆನ್ನೂರು**

ಮಲೇಬೆನ್ನೂರು, ಅ.22- ಪಟ್ಟಣದ ಹೊರವಲಯದಲ್ಲಿರುವ ಶ್ರೀ ಭದ್ರಾಕಾಳಿ ಸಮೇತ ಶ್ರೀ ವೀರಭದ್ರೇಶ್ವರ ದೇವಸ್ಥಾನಕ್ಕೆ ಕಾಶಿಪೀಠದ ನೂತನ ಜಗದ್ಗುರು ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಭಗತ್ಪಾದರು ಭೇಟಿ ನೀಡಿ, ಶ್ರೀ ವೀರಭದ್ರೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು.

ನಂತರ ದೇವಸ್ಥಾನದ ಕಟ್ಟಡವನ್ನು ಶ್ರೀಗಳು ದೇವಸ್ಥಾನದ ಶಿಲ್ಪಕಲೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ದೇವಸ್ಥಾನ ಟ್ರಸ್ಟ್ ಕಮಿಟಿಯ ಬಿ. ಪಂಚಪ್ಪ, ಬಿ. ನಾಗೇಂದ್ರಪ್ಪ, ಬಿ.ಚಿದಾನಂದಪ್ಪ, ಬಿ. ಉಮಾಶಂಕರ್, ಬಿ. ಶಂಭುಲಿಂಗಪ್ಪ, ಬಿ. ನಾಗೇಶ್, ಬಿ. ಮಲ್ಲಿಕಾರ್ಜುನ್, ಎಸ್.ಎನ್. ಶಂಭುಲಿಂಗಪ್ಪ, ಬಿ.ವಿ.ರುದ್ರೇಶ್, ಬಿ.ಎಂ. ಹರ್ಷ, ಮತ್ತಿತರರು ಈ ವೇಳೆ ಹಾಜರಿದ್ದರು.

# ಜಗಳೂರು : ರಾಜ್ಯ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆ

ಜಗಳೂರು, ಅ.22- ತಾಲ್ಲೂಕಿನ ಚಿಕ್ಕಮಲ್ಲನಹೊಳೆ ಗ್ರಾಮದ ಖಾಸಗಿ ಶಾಲಾ ಶಿಕ್ಷಕ ಹೆಚ್.ರವಿಕುಮಾರ್ ಅವರಿಗೆ ಅನುದಾನ ರಹಿತ ಖಾಸಗಿ ಶಾಲಾ ಶಿಕ್ಷಕರ ಸಂಘದ ವತಿಯಿಂದ ಕೊಡುಮಾಡುವ 2024 ನೇ ಸಾಲಿನ ರಾಜ್ಯಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.



ಪ್ರಸ್ತುತ ವಿಜಯನಗರ ಜಿಲ್ಲಾ ಹೊಸಪೇಟೆ ತಾಲ್ಲೂಕು ಚಿಲಕನಹಟ್ಟಿಯ ಶ್ರೀ ವಿವೇಕಾನಂದ ಖಾಸಗಿ ಶಾಲೆಯಲ್ಲಿ ಸೇರಿದಂತೆ ವಿವಿಧ ಶಾಖೆಗಳಲ್ಲಿ ಸುಮಾರು 13 ವರ್ಷಗಳಿಂದ ಖಾಸಗಿ ಶಾಲಾ ಶಿಕ್ಷಕ ವೃತ್ತಿ ಮಾಡುತ್ತಿದ್ದು, ತನ್ನ ವೃತ್ತಿಯಲ್ಲಿ ಸಾರ್ಥಕತೆ ಕಂಡುಕೊಡಿದ್ದಾರೆ. ಇವರ ಸುದೀರ್ಘ ಮತ್ತು ದಕ್ಷ ಸೇವೆ ಗುರಿತಿಸಿ ಈ ಪ್ರಶಸ್ತಿ ನೀಡಿದೆ.

ಇದೇ ಅಕ್ಟೋಬರ್ 21 ರಂದು ಬೆಂಗಳೂರು ನಗರದ ಜೂಬ್ಲಿ ಪಬ್ಲಿಕ್ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಬೆಂಗಳೂರಿನ ಜೂಬ್ಲಿ ಪಬ್ಲಿಕ್ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಉಪ ಸಭಾಪತಿ ಬೋಜೆಗೌಡ ಮತ್ತು ಕರ್ನಾಟಕ ರಾಜ್ಯ ಖಾಸಗಿ ಅನುದಾನ ರಹಿತ ಶಾಲಾ ಶಿಕ್ಷಕರ ಸಂಘದ ಪದಾದಿಕಾರಿಗಳು ಹಾಜರಿದ್ದರು.

# ಯೋಗೇಶ್ವರ್‌ಗೆ ಬೇಡಿಕೆ

**(1ನೇ ಪುಟದಿಂದ)** ಸಿಂಗ್ ಸುರ್ಜೇವಾಲ ನಗರಕ್ಕೆ ಧಾವಿಸಿದ್ದಾರೆ.

ನಿನ್ನೆ ಕಾಂಗ್ರೆಸ್ ಸೇರುವುದು ನಿಶ್ಚಿತವಾಗಿತ್ತಾದರೂ, ಇಂದು ಯೋಗೇಶ್ವರ್ ಗೊಂದಲಕ್ಕೆ ಸಿಲುಕಿದಂತೆ ಕಾಣುತ್ತಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಆ ಪಕ್ಷದ ಮುಖಂಡರು, ಯೋಗೇಶ್ವರ್ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡು ಚನ್ನಪಟ್ಟಣ ಕ್ಷೇತ್ರದಿಂದ ಕಣಕ್ಕಿಳಿಸಲು ಬಹಳ ಉತ್ಸುಕತೆಯಿಂದ ಇದ್ದಾರೆ.

ಯೋಗೇಶ್ವರ್ ಪರ ಮುಖ್ಯಮಂತ್ರಿ ಅವರು ಪರೋಕ್ಷವಾಗಿ ಬಹಿರಂಗವಾಗೇ ಹೇಳಿಕೆ ನೀಡಿದ್ದಾರೆ. ಇಷ್ಟಾದರೂ ಜೆಡಿಎಸ್ ನಿರ್ಧಾರದ ಮೇಲೆ ತಮ್ಮ ಮುಂದಿನ ಹೆಜ್ಜೆ ಎಂದು ಚಿತ್ರ ನಟರೂ ಆದ ಯೋಗೇಶ್ವರ್ ಕಾದು ನೋಡುವ ತಂತ್ರಕ್ಕೆ ಇಳಿದಿದ್ದಾರೆ.

# ಮಳೆ ಅನಾಹುತಗಳಿಗೆ ಪರಿಹಾರ ನೀಡಲು ಸಿದ್ಧತೆ : ಸಿದ್ದರಾಮಯ್ಯ

**(1ನೇ ಪುಟದಿಂದ)** ಚನ್ನಪಟ್ಟ ಣದಲ್ಲಿ ಸೂಕ್ತ ಅಭ್ಯರ್ಥಿಗೆ ಟಿಕೆಟ್ ನೀಡಬೇಕೆಂಬ ಚರ್ಚೆ ಆಗಿದೆ. ಮಾಜಿ ಸಂಸದ ಡಿ.ಕೆ.ಸುರೇಶ್ ಸಹ ಪ್ರಬಲ ಅಭ್ಯರ್ಥಿಯಾಗಿದ್ದಾರೆ. ಒಂದೆರಡು ದಿನದಲ್ಲಿ ಚನ್ನಪಟ್ಟಣ ಮತ್ತು ಶಿಗ್ಗಾಂವ್ ಕ್ಷೇತ್ರದಲ್ಲಿ ಯಾರಿಗೆ ಟಿಕೆಟ್ ಎನ್ನುವುದು ಸ್ಪಷ್ಟವಾಗಲಿದೆ ಎಂದು ತಿಳಿಸಿದರು.

ಸಂಡೂರು ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯಾಗಿ ಸಂಸದ ಇ.ತುಕಾರಾಂ ಅವರ ಪತ್ನಿಗೆ ಟಿಕೆಟ್ ನೀಡಲಾಗುವುದು ಎಂದರು.



# ಕುಂದೂರು ಗ್ರಾಪಂ ಅಧ್ಯಕ್ಷರಾಗಿ ರೇಣುಕಾಚಾರ್ಯ ಸೊಸೆ ಮಂಜುಳಾ

ಹೊನ್ನಾಳಿ, ಅ.22- ಕುಂದೂರು ಗ್ರಾ.ಪಂ. ಅಧ್ಯಕ್ಷರಾಗಿ ವಿ.ಮಂಜುಳಾ ಮಲ್ಲಿಕಾರ್ಜುನ ಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ಎ.ಕೆ ನಾಗೇಂದ್ರಪ್ಪ ಮಾಹಿತಿ ತಿಳಿಸಿದರು.

ಹಿಂದಿನ ಅಧ್ಯಕ್ಷೆ ರತ್ನಮ್ಮ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಇತರೆ ಸದಸ್ಯರಾರೂ ಉಮೇದುವಾರಿಕೆ ಸಲ್ಲಿಸದ ಕಾರಣ ಸಾಮಾನ್ಯ ವರ್ಗ ಮಹಿಳಾ ಕ್ಷೇತ್ರಕ್ಕೆ ಮೀಸಲಾದ ಅಧ್ಯಕ್ಷ ಸ್ಥಾನಕ್ಕೆ ವಿ.ಮಂಜುಳಾ ಅವರನ್ನು ಆಯ್ಕೆ ಮಾಡಲಾಯ್ತು ಎಂದು ಮಾಹಿತಿ ನೀಡಿದರು.

ಚುನಾವಣಾ ಸಂದರ್ಭದಲ್ಲಿ 14 ಜನ ಸದಸ್ಯರ ಪೈಕಿ 4 ಜನ ಸದಸ್ಯರು ಗೈರು ಹಾಜರಾಗಿದ್ದರು. ಮಂಜುಳಾ ಅವರು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಅವರ ಸೊಸೆ.

ಈ ಸಂದರ್ಭದಲ್ಲಿ ಗ್ರಾ.ಪಂ. ಉಪಾಧ್ಯಕ್ಷರಾದ ರಹಮತ್ ಉಲ್ಲಾ ಖಾನ್, ಮಾಜಿ ಅಧ್ಯಕ್ಷೆ ರತ್ನಮ್ಮ, ಸದಸ್ಯರಾದ ಎನ್.ಜಿ.ರೇಖಾ, ಸಿ.ಆಂಜನೇಯ, ಎಸ್. ಆರ್.ಪ್ರಸನ್ನಕುಮಾರ್, ಸುರೇಶ್, ಎಸ್.ಧನಂಜಯ, ಬಿ.ಎಂ.ಲತಾ, ಜಿ. ಯು.ಉದಯಕುಮಾರ್, ಪಿಡಿಒ ವಿಜಯಗೌಡ, ಕಾರ್ಯದರ್ಶಿ ವೀರೇಂದ್ರ, ಮುಖಂಡರಾದ ಬಿ.ಜಿ.ಶಿವಕುಮಾರ್, ಜಯಪ್ಪಗೌಡ, ಗುರುರಾಜ ಪಾಟೀಲ್, ಪರಮೇಶ್ವರಪ್ಪ, ತಿಪ್ಪೇಶಪ್ಪ, ಎಂ.ಪಿ.ಮಲ್ಲಿಕಾರ್ಜುನಸ್ವಾಮಿ, ಎಂ.ಪಿ.ರಾಜು, ರಾಜುಗೌಡ, ಎಂ.ಟಿ.ಹಾಲೇಶ್ ಮತ್ತಿತರರು ಉಪಸ್ಥಿತರಿದ್ದರು.

# ಭವಿಷ್ಯದ ದಿನಗಳು ಬಂಗಾರ

**(1ನೇ ಪುಟದಿಂದ)** ಕೊಡಲು ಸೂಚಿಸಿದ್ದಾರೆ. ತಕ್ಷಣವೇ ಪೂರ್ಣವಾಗಿ ಹಾಳವಾಗಿರುವ ಹಲವು ಪೈಪ್ ಗಳನ್ನು ತೆರುವುಗೊಳಿಸಿ ತುರ್ತಾಗಿ ಹೊಸಪೈಪ್ ಗಳನ್ನು ಹಾಕಿ ನೀರು ಹರಿಸಲು ತಿಳಿಸಲಾಗಿದೆ ಎಂದರು.

ಶಾಸಕ ಬಿ.ದೇವೇಂದ್ರಪ್ಪ ಮಾತನಾಡಿ, ಜಗಳೂರು ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆಆಡಳಿತ ಮಾಡಿದ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಮೂರು ಸರಕಾರಗಳು, ಕ್ಷೇತ್ರದ ಮೂವರು ಶಾಸಕರು ಕೆಲಸ ಮಾಡಿದರೆ. ಸಿರಿಗೆರೆ ಶ್ರೀ ಒಬ್ಬರೇ ನೇತೃತ್ವ ವಹಿಸಿದ್ದ ಫಲವಾಗಿ 57 ಕೆರೆಗಳಿಗೆ ತುಂಗೆ ಭದ್ರೆಯಿಂದ ನೀರು ಬಂದಿದ್ದು, ರೈತರಾದ ನಾವುಗಳು ಸದ್ಬಳಕೆ ಮಾಡಿಕೊಂಡು ಬದುಕು ಬಂಗಾರ ಮಾಡಿಕೊಳ್ಳಬೇಕು ಎಂದರು.

ನೀರಾವರಿ ಇಲಾಖೆಯ ನಿವೃತ್ತ ಎಂ.ಡಿ. ಮಲ್ಲಿಕಾರ್ಜುನ್ ಗುಂಗಿ ಮಾತನಾಡಿ, ನಾನು ಮೂರು ಬಾರಿ ತುಪ್ಪದಹಳ್ಳಿಕೆರೆಗೆ ಶ್ರೀಗಳ ಆದೇಶದಂತೆ ಬಂದು ಕೆಲಸ ನಿರ್ವಹಿಸಿದ ತೃಪ್ತಿ ನನಗೆ ತಂದಿದೆ. ಎರಡು ವರ್ಷದ ಹಿಂದೆ ಕೆರೆ ತುಂಬಿಸಿದ್ದು, ಈಗ ಸಹ ಕೆರೆ ಕೋಡಿ ಬಿದ್ದಿದ್ದು ರೈತರಂತೆ ನನಗೆ ಸಂತಸ ತಂದಿದೆ ಎಂದರು.

ಮಾಜಿ ಶಾಸಕರಾದ ಎಸ್.ವಿ. ರಾಮಚಂದ್ರ ಮತ್ತು ಎಚ್.ಪಿ.ರಾಜೇಶ್ ಮಾತನಾಡಿದರು. ಮುಖಂಡರಾದ ವಕೀಲ ಕೆ.ಎಂ. ಬಸವರಾಜಪ್ಪ, ಶಿವಕುಮಾರ್, ಬಿಜೆಪಿ ಮಂಡಲ ಅಧ್ಯಕ್ಷ ಎಚ್.ಸಿ.ಮಹೇಶ್, ನೀರಾವರಿ ಇಲಾಖೆಯ ಅಧಿಕಾರಿಗಳು ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಮುಖಂಡರುಗಳು ಉಪಸ್ಥಿರಿದ್ದರು.

# ನ್ಯಾಯಾಧೀಶ ಸೋಗಿನಲ್ಲಿ ವಂಚಿಸುತ್ತಿದ್ದವನ ಬಂಧನ

**2019ರಿಂದಲೇ ನಕಲಿ ಕೋರ್ಟ್ ರೂಪಿಸಿ ಜನರಿಗೆ ಮೋಸ**

ಅಹಮದಾಬಾದ್, ಅ. 22 - ತಾನು ಟ್ರಿಬ್ಯೂನಲ್ ಒಂದರ ನ್ಯಾಯಾಧೀಶ ಎಂದು ಹೇಳಿಕೊಂಡು ವಂಚನೆ ಮಾಡುತ್ತಿದ್ದ ವ್ಯಕ್ತಿಯನ್ನು ಗುಜರಾತ್ ಪೊಲೀಸರು ಬಂಧಿಸಿದ್ದಾರೆ.

2019 ರಿಂದ ಈ ವ್ಯಕ್ತಿ ಟ್ರಿಬ್ಯೂನಲ್ ಹೆಸರಿನಲ್ಲಿ ನಕಲಿ ತೀರ್ಪುಗಳನ್ನು ನೀಡುತ್ತಿದ್ದ. ವಿಶೇಷವಾಗಿ ಗಾಂಧಿನಗರ ಪ್ರದೇಶಗಳ ಜಮೀನುಗಳ ಬಗ್ಗೆ ತೀರ್ಪು ನೀಡಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಮೋರಿಸ್ ಸ್ಯಾಮ್ಯುಲ್ ಕ್ರಿಶ್ಚಿಯನ್ ಎಂಬಾತ ಜನರು ತಾವು ನಿಜವಾದ ನ್ಯಾಯಾಲಯದಲ್ಲಿದ್ದೇವೆ ಎಂಬ ಭಾವನೆ ಮೂಡಿಸಿ ವಂಚನೆ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಈತನ ಬೋಗಸ್ ಟ್ರಿಬ್ಯೂನಲ್ ನಿಜವಾದ ನ್ಯಾಯಾಲಯದ ಕೋಣೆಯ ರೀತಿ ಇತ್ತು. 2019ರಿಂದಲೂ ಈ ರೀತಿಯ ವಂಚನೆ ನಡೆಸಲಾಗುತ್ತಿತ್ತು ಎಂಬುದು ತನಿಖೆಯಿಂದ ಕಂಡು ಬಂದಿದೆ.

ಜಮೀನು ವಿವಾದಗಳಲ್ಲಿ ಸಿಲುಕಿದ್ದ ವ್ಯಕ್ತಿಗಳನ್ನು ಆರೋಪಿ ಸಂಪರ್ಕಿಸುತ್ತಿದ್ದ. ತ್ವರಿತವಾಗಿ ತೀರ್ಪು ನೀಡುವುದಾಗಿ ಹೇಳಿ ಭಾರೀ ಶುಲ್ಕ ಪಡೆಯುತ್ತಿದ್ದ. ನಂತರ ನ್ಯಾಯಾಧೀಶರ ವೇಷ ಹಾಕಿಕೊಂಡು ನಕಲಿ ತೀರ್ಪು ನೀಡಿ ವಂಚಿಸುತ್ತಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಇದಕ್ಕಾಗಿ ಗಾಂಧಿನಗರದಲ್ಲಿ ನಕಲಿ ನ್ಯಾಯಾಲಯ ಕೊಠಡಿಯನ್ನು ಸ್ಥಾಪಿಸಿದ್ದ. ಈ ರೀತಿಯ ನಕಲಿ ನ್ಯಾಯಾಲಯದ ಆದೇಶವೊಂದು ಇತ್ತೀಚೆಗೆ ನಗರದ ಸಿವಿಲ್ ನ್ಯಾಯಾಲಯದ ರಿಜಿಸ್ಟ್ರಾರ್ ಹಾರ್ದಿಕ್ ದೇಸಲ್ ಅವರ ಗಮನಕ್ಕೆ ಬಂದಿತ್ತು. ಅವರು ದೂರು ನೀಡಿದ ನಂತರ ಇಡೀ ಪ್ರಕರಣ ಬೆಳಕಿಗೆ ಬಂದಿದೆ.

ಈ ಬಗ್ಗೆ ವಂಚಕನನ್ನು ಬಂಧಿಸಿ ಪ್ರಕರಣ ದಾಖಲಿಸಲಾಗಿದೆ. ಆರೋಪಿ ವಿರುದ್ಧ ಈ ಹಿಂದೆ 2015ರಲ್ಲಿ ಮಣಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣವೊಂದು ದಾಖಲಾಗಿತ್ತು.

# ಹರಪನಹಳ್ಳಿಯಲ್ಲಿ ವಾಲ್ಮೀಕಿ ಜಯಂತಿ



ಹರಪನಹಳ್ಳಿ, ಅ.22- ಪಟ್ಟಣದ ವಾಲ್ಮೀಕಿ ನಗರದ ಹಾಲಸ್ವಾಮಿ ಮಠದ ಬಳಿಯಿರುವ ಮಹರ್ಷಿ ವಾಲ್ಮೀಕಿ ನಾಮಫಲಕಕ್ಕೆ ವಿಶೇಷ ಪೂಜೆ ಸಲ್ಲಿಸಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಹಾಲಸ್ವಾಮಿ ಮಠದ ಸಣ್ಣಹಾಲಸ್ವಾಮಿ, ಪುರಸಭೆ ಸದಸ್ಯ ರೊಕ್ಕಪ್ಪ, ವಕೀಲ ಕೆಂಗಳ್ಳಿ ಪ್ರಕಾಶ, ಮ್ಯಾಕಿ ಅಜ್ಜಯ್ಯ, ರಾಯದುರ್ಗದ ಯಲ್ಲಪ್ಪ, ಅಶೋಕ ಸೇರಿದಂತೆ ಇತರರು ಇದ್ದರು.


## ತೃತೀಯ ವರ್ಷದ ಪುಣ್ಯಸ್ಮರಣೆ



ನಿಧನ : 23.10.2021

**ಶ್ರೀಮತಿ ದಿ. ಪುಷ್ಪಲತಾ**

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ,

ಕೆ.ರಾಘವೇಂದ್ರ, ಸಚಿನ್, ಶಶಾಂಕ್, ರೇಷ್ಮ, ಧ್ವನಿ, ಕೃಷ್ಣಮೂರ್ತಿ, ಶಶಿಕಲಾ, ಸಂಚಿತಾ, ವೆಂಕಟೇಶ್ ಪ್ರಸಾದ್, ಚಂದ್ರ ಮೋಹನ್, ರಾಧಿಕಾ, ಆಶುತೋಷ್

**ಮೋಹನ್ ಕಾಫಿ ಬಾರ್ ಹಾಗೂ ಬಂಧು-ಮಿತ್ರರು**



## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



॥ ಶ್ರೀ ಕೂಡಲಸಂಗಮೇಶ್ವರ ಪ್ರಸನ್ನ ॥

ದಾವಣಗೆರೆ ಸಿಟಿ ಎಂಸಿಸಿ ಬಿ ಬ್ಲಾಕ್, #2721/1, 2ನೇ ಮೇನ್, 3ನೇ ಮೇನ್, ಶ್ರೀ ಬಿದರಿಕುಂದಿ ಸಿದ್ದಲಿಂಗಪ್ಪ ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 11.10.2024ನೇ ಶುಕ್ರವಾರ ಬೆಳಗಿನ ಜಾವ 3.30ಕ್ಕೆ ನನ್ನಧರ್ಮಪತ್ನಿಯಾದ

**ಬಿದರಕುಂದಿ ದಿ. ನೀಲಮ್ಮ**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಶಿವಗಣಾರಾಧನೆ'ಯನ್ನು**

ದಿನಾಂಕ : 23.10.2024ನೇ ಬುಧವಾರ ಬೆಳಿಗ್ಗೆ 12.30 ರಿಂದ ಶ್ರೀ ಆಂಜನೇಯ ಮತ್ತು ಶ್ರೀ ರೇವಣಸಿದ್ದೇಶ್ವರ ದೇವಸ್ಥಾನ, 2ನೇ ಕ್ರಾಸ್ ಕೆ.ಟಿ.ಜೆ. ನಗರ, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು : **ಶ್ರೀ ಬಿದರಕುಂದಿ ಸಿದ್ದಲಿಂಗಪ್ಪ ಹಾಗೂ ಬಂಧು-ಮಿತ್ರರು, ದಾವಣಗೆರೆ, ಮೊ : 94822 82425**

ವಿ.ಸೂ.: ಆಹ್ವಾನಪತ್ರಿಕೆ ತಲುಪದೇ ಇರುವವರು ಇದನ್ನೆ ಆಹ್ವಾನವೆಂದು ಭಾವಸಿ ಆಗಮಿಸಬೇಕಾಗಿ ವಿನಂತಿ.


# ಜಾತಿ ಗಣತಿಗೆ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಲು ಆಗ್ರಹ

**(1ನೇ ಪುಟದಿಂದ)** ಅಧ್ಯಕ್ಷರಾಗಿದ್ದ ಹೆಚ್. ಕಾಂತರಾಜು ಅವರ ಅಧ್ಯಕ್ಷತೆಯ ಜಾತಿ ಗಣತಿ ವರದಿಯ ಸಾಧಕ - ಬಾಧಕ ಬಗ್ಗೆ ಸುದೀರ್ಘ ವಾಗಿ ಚರ್ಚಿಸಿದ ನಂತರ ಈ ಆಗ್ರಹ ಮಾಡ ಲಾಯಿತು. ವೀರಶೈವ ಲಿಂಗಾಯತರು ಜಾತಿ ಗಣತಿಯ ವಿರೋಧಿಗಳಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇವೆ. ಆದರೆ, ಕಳೆದ 10 ವರ್ಷಗಳ ಹಿಂದೆ ನಡೆಸಿರುವ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯು ಹಲವು ವೈರುದ್ಧ ಮತ್ತು ಲೋಪಗಳಿಂದ ಕೂಡಿದ್ದು, ಇದನ್ನು ಸರಿಪಡಿಸುವ ಅಗತ್ಯವಿದೆ. ಹೀಗಾಗಿ ಹೊಸದಾಗಿ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಬೇಕೆಂದು ಮಹಾಸಭಾವು ಸರ್ಕಾರವನ್ನು ಒತ್ತಾಯಿಸಿತು.

ರಾಜ್ಯ ಸರ್ಕಾರದ ಪರಿಗಣನೆಯಲ್ಲಿರುವ ರಾಜ್ಯ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸುಗಳು ಕಾಂತರಾಜು ಅಧ್ಯಕ್ಷತೆಯಲ್ಲಿ ನಡೆಸಿದ ಸಮೀಕ್ಷಾ ವರದಿಯಾಗಿದ್ದು, ಈ ವರದಿಯು ಅವೈಜ್ಞಾನಿಕ ಮತ್ತು ಅಸಂವಿಧಾನಿಕವಾದುದ್ದರಿಂದ ಸ್ವೀಕಾರಕ್ಕೆ ಅರ್ಹವಲ್ಲವೆಂದು ಮಹಾಸಭೆಯು ಸ್ಪಷ್ಟವಾಗಿ ಅಭಿಪ್ರಾಯಿಸುತ್ತದೆ. ಈ ಹಿನ್ನೆಲೆಯಲ್ಲಿ ಈ ಕುರಿತಾದ ಯಾವುದೇ ಉದ್ದೇಶಿತ ಪ್ರಕ್ರಿಯೆಯನ್ನು ಕೈಬಿಡಬೇಕೆಂದು ಮಹಾಸಭೆಯು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿತು.


ರಾಜ್ಯ ಹಿಂದುಳಿದ ವರ್ಗಗಳ (ಓ.ಬಿ.ಸಿ) ಪಟ್ಟಿಯಲ್ಲಿ ವಿವಿಧ ವರ್ಗಗಳ ಅಡಿಯಲ್ಲಿ ಹಲವಾರು ಲಿಂಗಾಯತ ಉಪಪಂಗಡಗಳ ಹೆಸರಿನ ಜೊತೆಯಲ್ಲಿ 'ಲಿಂಗಾಯತ' ಪದವಿಲ್ಲದೇ ಕೇವಲ ಉಪಪಂಗಡಗಳ ಹೆಸರನ್ನು ಮಾತ್ರ ನಮೂದಿಸಲಾಗಿರುತ್ತದೆ. ಆದುದರಿಂದ ಉಚ್ಚ ಹಾಗೂ ಸರ್ವೋಚ್ಚ ನ್ಯಾಯಾಲಯ ಸಿವಿಲ್ ಅಪೀಲ್ ನಂ. 7241/2021 ಪ್ರಕರಣದಲ್ಲಿ ನೀಡಿರುವ ತೀರ್ಪನ್ನು ಆಧಾರವಾಗಿರಿಸಿಕೊಂಡು, ಎಲ್ಲಾ ಲಿಂಗಾಯತ ಉಪಪಂಗಡಗಳ ಜೊತೆಯಲ್ಲಿ 'ಲಿಂಗಾಯತ' ಎಂದು ನಮೂದಿಸಿದ ಆಯ್ಕೆಯನ್ನು ಈಗಿರುವ ಪಟ್ಟಿಯಲ್ಲಿ, ಉಪಪಂಗಡಗಳಿರುವ ವರ್ಗಗಳನ್ನು ಬದಲಾಯಿಸದೇ ಸರ್ಕಾರದ ಆದೇಶಕ್ಕೆ ಸೂಕ್ತ ತಿದ್ದುಪಡಿ ತರಲು ರಾಜ್ಯ ಸರ್ಕಾರವನ್ನು ಮಹಾಸಭಾ ಕೇಳಿಕೊಂಡಿತು.

ವೀರಶೈವ-ಲಿಂಗಾಯತ ಎಲ್ಲಾ ಉಪಪಂಗಡಗಳನ್ನು ಕೇಂದ್ರ ಹಿಂದುಳಿದ ವರ್ಗಗಳ (ಓ.ಬಿ.ಸಿ) ಪಟ್ಟಿಯಲ್ಲಿ ಸೇರಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ಮಹಾಸಭೆಯು ಮುಖ್ಯಮಂತ್ರಿಗಳಿಗೆ ಮನವಿ ಮಾಡಿತು.

ಸಾಮಾಜಿಕ ಅಸಮಾನತೆಯ ನಿರಾಕರಣೆ ಮತ್ತು ಸಾಮಾಜಿಕ ನ್ಯಾಯ ಕುರಿತಾದ ಸರ್ಕಾರದ ಎಲ್ಲಾ ಸೈದ್ಧಾಂತಿಕ, ಆಡಳಿತಾತ್ಮಕ ಮತ್ತು ಕಾನೂನಾತ್ಮಕ ಪ್ರಕ್ರಿಯೆಗಳಲ್ಲಿ ವೀರಶೈವ ಲಿಂಗಾಯತ ಸಮುದಾಯ ಮುಂಚೂಣಿಯಲ್ಲಿ ನಿಂತು ಬೆಂಬಲಿಸುತ್ತದೆ ಎಂದು ಮಹಾಸಭಾವು ಸರ್ಕಾರಕ್ಕೆ ತಿಳಿಸಿತು.

# ಆಸ್ತಿ ನೋಂದಣಿಗೆ ಹಲವು ಕಂಟಕ... ಜನರಿಗೆ ಸಂಕಟ

**(1ನೇ ಪುಟದಿಂದ)** ಸರ್ವರ್ ಸಮಸ್ಯೆ, ಸಮರ್ಪಕ ದಾಖಲೆ ನೀಡದೇ ಇರುವುದು ಸೇರಿದಂತೆ ಹಲವು ಕಾರಣಗಳಿಂದಾಗಿ ಇ-ಖಾತೆ ಪಡೆಯಲು ಜನರು ಹರಸಾಹಸ ಪಡುತ್ತಿದ್ದರು. ಮಹಾನಗರ ಪಾಲಿಕೆಯಲ್ಲಿ ಸಾವಿರಾರು ರೂಪಾಯಿ ಹಣ ಕೊಟ್ಟು ಇ ಖಾತೆ ತರಬೇಕಿದೆ ಎಂಬ ಆರೋಪವೂ ಕೇಳಿ ಬಂದಿತ್ತು. ಇದಲ್ಲದೇ, ನೋದಣಿ ಮಾಡಿಸಿ ಕೊಳ್ಳು ವವರು 10 ವರ್ಷ ಗಳಿಂದ ಆಧಾರ್ ಕಾರ್ಡ್ ತಿದ್ದುಪಡಿ ಮಾಡದೇ ಇರುವುದೂ ಸಹ ನೋಂದಣಿ ವಿಳಂಬಕ್ಕೆ ಕಾರಣವಾಗಿತ್ತು. ಇದೀಗ ಮತ್ತೊಂದು ಕಾರಣಕ್ಕಾಗಿ ನೋಂದಣಿ ಕಾರ್ಯ ಸ್ಥಗಿತಗೊಂಡಿರುವುದು ಆಸ್ತಿ ಖರೀದಿಸುವ ಹಾಗೂ ಮಾರಾಟ ಮಾಡುವವರಿಗೆ ತಲೆ ನೋವಾಗಿ ಪರಿಣಮಿಸಿದೆ.



**ನೋಂದಣಿ ಕಚೇರಿಯಲ್ಲಿರುವ ಬೋರ್ಡ್**

**ಏಕೆ ನೋಂದಣಿ ಸ್ಥಗಿತ?:** ರಾಜ್ಯದಲ್ಲಿ ಕೇಂದ್ರದ ನೋಂದಣಿ ಕಾಯಿದೆ-1908ಗೆ ತಿದ್ದುಪಡಿ ತರುವ ಕರ್ನಾಟಕ ನೋಂದಣಿ ತಿದ್ದುಪಡಿ ಕಾಯಿದೆ -2023ಕ್ಕೆ ರಾಷ್ಟ್ರಪತಿಗಳು ಕಳೆದ ಅ.8ರಂದು ರಂದು ಅಂಕಿತ ಹಾಕಿದ್ದು, ರಾಜ್ಯ ಸರ್ಕಾರ ಅ.19 ರಂದು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟಿಸಿದೆ.

ಈ ತಿದ್ದುಪಡಿಯಿಂದ, ನಕಲಿ ದಾಖಲೆ ಆಧರಿಸಿ ಆಸ್ತಿ ದಸ್ತಾವೇಜು ನೋಂದಣಿ ಅಥವಾ ನಕಲಿ ದಸ್ತಾವೇಜು ಸೃಷ್ಟಿ ಮಾಡಿದರೆ ಜಿಲ್ಲಾ ನೋಂದಣಾಧಿಕಾರಿಗಳಿಗೆ ರದ್ದುಪಡಿಸಲು ಅಧಿಕಾರ ನೀಡಲಾಗಿದೆ.

ಜತೆಗೆ ನಕಲಿ ದಾಖಲೆ ಆಧರಿಸಿ ನೋಂದಣಿ ಮಾಡಿದ ಉಪ ನೋಂದಣಾಧಿಕಾರಿಗಳಿಗೆ 3 ವರ್ಷದವರೆಗೆ ಜೈಲು ಶಿಕ್ಷೆಗೆ ಗುರಿಪಡಿಸಬಹುದು ಎಂದು ಹೇಳಲಾಗಿದೆ. ಹೀಗಾಗಿ ಉಪ ನೋಂದಣಾಧಿಕಾರಿಗಳು ರಾಜ್ಯಾದ್ಯಂತ ಸೋಮವಾರ ಬೆಳಗ್ಗೆಯಿಂದ ದಸ್ತಾವೇಜುಗಳ ಪರಿಶೀಲನೆ ಹಾಗೂ ನೋಂದಣಿಯನ್ನು ಸ್ಥಗಿತಗೊಳಿಸಿದ್ದಾರೆ.

> **ಪಾಲಿಕೆಯಿಂದ ಇ-ಸ್ವತ್ತು ನೀಡಲು ಅನಗತ್ಯವಾಗಿ ವಿಳಂಬ ಮಾಡಲಾಗುತ್ತಿದೆ. ಈ ಹಿಂದಿನ ಪಾಲಿಕೆ ಸಾಮಾನ್ಯ ಸಭೆಯಲ್ಲಿ 42 ದಿನಗಳಲ್ಲಿ ಇ-ಸ್ವತ್ತು ಕೊಡಿಸಲು ಕ್ರಮ ಕೈಗೊಳ್ಳುವುದಾಗಿ ಆಯುಕ್ತರು ಭರವಸೆ ನೀಡಿದ್ದರು. ಆದರೆ ಇತ್ತೀಚೆಗೆ ನಡೆದ ಸಭೆಯಲ್ಲಿ ಸಕಾಲದಲ್ಲಿ 7 ದಿನ ಕಾಲಾವಕಾಶವಿದೆ ಎನ್ನುತ್ತಿದ್ದಾರೆ. ಜನರ ತುರ್ತು ಅಗತ್ಯತೆಗಳನ್ನು ಪಾಲಿಕೆ ಸಿಬ್ಬಂದಿಗಳು ದುರುಪಯೋಗ ಪಡಿಸಿಕೊಂಡು ಸಾರ್ವಜನಿಕರಿಂದ ಸಾವಿರಾರು ರೂಪಾಯಿ ಹಣ ವಸೂಲಿ ಮಾಡುತ್ತಿದ್ದಾರೆಯ**
>
> **- ಎಸ್.ಟಿ. ವೀರೇಶ್, ಮಾಜಿ ಮೇಯರ್, ಮಹಾನಗರ ಪಾಲಿಕೆ.**

## ವಿಳಂಬದಿಂದ ನೋಂದಣಿಗೆ ಹಿನ್ನಡೆ ?

**(1ನೇ ಪುಟದಿಂದ)** 'ಕೊಡಬೇಕಾದ್ದು ಕೊಟ್ಟರೆ ಒಂದೆರಡು ದಿನಗಳಲ್ಲಿಯೇ ಇ-ಸ್ವತ್ತು ಮಾಡಲಾಗುತ್ತದೆ.' ಇಲ್ಲದಿದ್ದರೆ ತಿಂಗಳುಗಟ್ಟಲೆಯಾದರೂ ಕೊಡುತ್ತಿಲ್ಲ ಎನ್ನುವುದು ಸಾರ್ವಜನಿಕರ ಆರೋಪ.

ಇತ್ತೀಚೆಗಷ್ಟೇ ನಡೆದ ಮಹಾನಗರ ಪಾಲಿಕೆ ಸಾಮಾನ್ಯ ಸಭೆಯಲ್ಲಿ ಸದಸ್ಯರು ಪಕ್ಷಾತೀತವಾಗಿ ಇ-ಸ್ವತ್ತು ನೀಡಲು ವಿಳಂಬ ಮಾಡುತ್ತಿರುವ ಕ್ರಮಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ, ಶೀಘ್ರ ಇ-ಸ್ವತ್ತು ನೀಡಲು ಕ್ರಮ ಕೈಗೊಳ್ಳುವಂತೆಯೂ ಆಗ್ರಹಿಸಿದರು.

ರಾಜ್ಯದ ಹೃದಯ ಭಾಗ ದಾವಣಗೆರೆ ದಿನೇ ದಿನೇ ಬೆಳೆಯುತ್ತಿದೆ. ನಗರದ ಸುತ್ತ ಮುತ್ತಲಿನ ಪ್ರದೇಶಗಳು ಸೈಟುಗಳಾಗಿ ಮಾರ್ಪಾಡುಗುತ್ತಿವೆ. ನಿವೇಶನ, ಮನೆ ಕೊಡು-ಕೊಳ್ಳುವಿಕೆ ನಿತ್ಯವೂ ಹೆಚ್ಚಾಗಿರುತ್ತದೆ. ಇದರಿಂದ ಸರ್ಕಾರಕ್ಕೆ ನೋಂದಣಿ ಶುಲ್ಕ, ಸ್ಟ್ಯಾಂಪ್ ತೆರಿಗೆ ರೂಪದಲ್ಲಿ ಕೋಟ್ಯಾಂತರ ರೂಪಾಯಿ ಹಣ ಸಂದಾಯವಾಗುತ್ತಿತ್ತು. ಆದರೆ ಈ ಆಸ್ತಿ ವಿಳಂಬದಿಂದಾಗಿ ವಹಿವಾಟು ಕುಂಠಿತಗೊಂಡಿದ್ದರಿಂದ ಆದಾಯಕ್ಕೂ ಕತ್ತರಿ ಬಿದ್ದಂತಾಗಿದೆ.

ಪ್ರತಿ ದಿನ ಪಾಲಿಕೆಯ ಮೂರು ವಲಯಗಳಿಂದ ಇ-ಸ್ವತ್ತಿಗಾಗಿ 80ಕ್ಕೂ ಹೆಚ್ಚು ಅರ್ಜಿಗಳು ಬರುತ್ತಿವೆ. ಈ ಸ್ವತ್ತು ಬೇಕಾದರೆ ಪ್ರಸಕ್ತ ವರ್ಷದ ಕಂದಾಯ ಕಟ್ಟಿರಬೇಕು. ತೆರಿಗೆ ನವೀಕರಣಗೊಂಡ ನಂತರವೇ ಇ-ಸ್ವತ್ತು ಕೊಡಬೇಕು. ತೆರಿಗೆ ನವೀಕರಣ ನಾಲ್ಕು ಅಧಿಕಾರಿಗಳ ಲಾಗಿನ್ ಮೂಲಕ ಪ್ರಕ್ರಿಯೆ ಮಾಡಬೇಕಾಗುತ್ತದೆ. ಇದನ್ನು ಸರಳೀಕರಮ ಮಾಡಬೇಕೆಂಬ ಒತ್ತಾಯ ಕೇಳಿ ಬರುತ್ತಿದ್ದು, ಇದಕ್ಕಾಗಿ ಪತ್ರ ಬರೆಯಲಾಗಿದೆ ಎಂದು ಉಪ ಆಯುಕ್ತರಾದ ಎಸ್. ಲಕ್ಷ್ಮೀ ಹೇಳಿದರು.

ಕಳೆದೊಂದು ತಿಂಗಳಿಂದ ನೋಂದಣಿಗೆ ಇ-ಸ್ವತ್ತು ಕಡ್ಡಾಯ ಮಾಡಿರುವುದು ಉತ್ತಮ ಕಾರ್ಯ. ಇ ಸ್ವತ್ತು ವಿಳಂಬ ಹಾಗೂ ಹತ್ತು ವರ್ಷಗಳ ಹಳೆಯ ಆಧಾರ್ ಕಾರ್ಡ್ ನವೀಕರಣದ ಸಮಸ್ಯೆಯಿಂದಾಗಿ ನೋಂದಣಿಗೆ ಸ್ವಲ್ಪ ಮಟ್ಟಿನ ಹಿನ್ನಡೆಯಾಗಿದೆ ಎಂದು ಉಪ ನೋಂದಣಾಧಿಕಾರಿ ವೀಣಾ ಆರ್.ಎಲ್. ಹೇಳಿದರು.

# ಡಿಕೆಶಿ ವಿರುದ್ಧದ ತನಿಖೆ ಅನುಮತಿ ವಾಪಸ್ ಪ್ರಶ್ನಿಸಿ ಸುಪ್ರೀಂನಲ್ಲಿ ಸಿಬಿಐ ಅರ್ಜಿ



ನವದೆಹಲಿ, ಅ. 22 - ಅಕ್ರಮ ಆಸ್ತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ತನಿಖೆ ನಡೆಸಲು ತನಗೆ ನೀಡಲಾಗಿದ್ದ ಅನುಮತಿಯನ್ನು ವಾಪಸ್ ಪಡೆದ ಕರ್ನಾಟಕ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ, ಸುಪ್ರೀಂ ಕೋರ್ಟ್‌ನಲ್ಲಿ ಸಿಬಿಐ ಅರ್ಜಿ ದಾಖಲಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ನವೆಂಬರ್ 23, 2023ರಲ್ಲಿ ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ವಾಪಸ್ ಪಡೆದಿತ್ತು. ಇದಕ್ಕೂ ಮುಂಚೆ 2019ರಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರದಲ್ಲಿದ್ದಾಗ ಶಿವಕುಮಾರ್ ವಿರುದ್ಧ ತನಿಖೆಗೆ ಅನುಮತಿ ನೀಡಿರುವುದು ಕಾನೂನಿಗೆ ವಿರುದ್ಧವಾಗಿದೆ ಎಂದು ರಾಜ್ಯ ಸರ್ಕಾರ ಹೇಳಿತ್ತು.

ರಾಜ್ಯ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಕರ್ನಾಟಕ ಹೈಕೋರ್ಟ್‌ನಲ್ಲಿ ಸಿಬಿಐ ಹಾಗೂ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರು ಅರ್ಜಿ ದಾಖಲಿಸಿದ್ದರು. ಕಳೆದ ಆಗಸ್ಟ್ 29ರಂದು ಹೈಕೋರ್ಟ್ ಅರ್ಜಿಯನ್ನು ತಳ್ಳಿ ಹಾಕಿತ್ತು.

ನಂತರ ಶಾಸಕ ಯತ್ನಾಳ್ ಅವರು ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು. ಈ ಬಗ್ಗೆ ಶಿವಕುಮಾರ್ ಹಾಗೂ ರಾಜ್ಯ ಸರ್ಕಾರಕ್ಕೆ ಸೆಪ್ಟೆಂಬರ್ 17ರಂದು ಸುಪ್ರೀಂಕೋರ್ಟ್ ನೋಟಿಸ್ ಕಳಿಸಿತ್ತು.

ಶಿವಕುಮಾರ್ ಅವರು 2013ರಿಂದ 2018ರ ನಡುವೆ ಆದಾಯವನ್ನು ಮೀರಿ ಅಕ್ರಮ ಆಸ್ತಿ ಗಳಿಸಿದ್ದಾರೆ ಎಂದು ಸಿಬಿಐ ಆರೋಪಿಸಿತ್ತು. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ನೀಡಿದ ಅನುಮತಿಯ ಆಧಾರದ ಮೇಲೆ ಅಕ್ಟೋಬರ್ 3, 2020 ರಂದು ಶಿವಕುಮಾರ್ ವಿರುದ್ಧ ಸಿ.ಬಿ.ಐ. ಅಕ್ರಮ ಆಸ್ತಿ ಪ್ರಕರಣ ದಾಖಲಿಸಿತ್ತು. ಅಕ್ರಮ ಆಸ್ತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಹಿಂದೆ ಶಿವಕುಮಾರ್ ಬಂಧನ ಸಹ ನಡೆದಿತ್ತು. ನಂತರ ಜಾಮೀನಿನ ಮೇಲೆ ಅವರನ್ನು ಬಿಡುಗಡೆ ಮಾಡಲಾಗಿತ್ತು.

# ಜಗಳೂರು : ತರಕಾರಿ ಬೆಳೆ ಇಳುವರಿಗೆ ದೃಢೀಕೃತ ಬೀಜ, ಸಸ್ಯ ಬಳಸಿ



**ತಾಲ್ಲೂಕಿನ ಕೆವಿಕೆ ಕಾರ್ಯಕ್ರಮದಲ್ಲಿ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ**

ಜಗಳೂರು, ಅ.22- ತರಕಾರಿ ಬೆಳೆಗಳಲ್ಲಿ ಉತ್ತಮ ಇಳುವರಿಗೆ ದೃಢೀಕೃತ ಬೀಜ ಮತ್ತು ಸಸ್ಯಗಳನ್ನು ಬಳಸಿದರೆ ಉತ್ತಮ ಇಳುವರಿ ಸಾಧ್ಯವೆಂದು ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ ಅಭಿಪ್ರಾಯಪಟ್ಟರು.

ಜಗಳೂರು ತಾಲ್ಲೂಕು ನಿಬಗೂರು ಗ್ರಾಮದಲ್ಲಿ ಹಮ್ಮಿಕೊಂಡ ಮೆಣಸಿನಕಾಯಿ ಬೆಳೆಯ ಸಮಗ್ರ ಕೃಷಿ ಪ್ರಾತ್ಯಕ್ಷಿಕೆಯ ತಾಕಿಗೆ ಭೇಟಿ ನೀಡಿ ಅವರು ಮಾತನಾಡಿದರು.

ಪ್ರಸ್ತುತ ಗ್ರಾಮದಲ್ಲಿ ಅರ್ಕಾ ಗಗನ್ ಮೆಣಸಿನಕಾಯಿ ಹೈಬ್ರಿಡ್ ತಳಿಯ ಪ್ರಾತ್ಯಕ್ಷಿಕೆ ಹಮ್ಮಿಕೊಂಡಿದ್ದು, ಈ ಸಂಕರಣ ತಳಿಯು ಉತ್ತಮವಾದ ಕಾರದ ಅಂಶ ಹೊಂದಿದ್ದು, ಪ್ರಾರಂಭದಲ್ಲಿ ಹಸಿರು ಕಾಯಿಗಳಾಗಿದ್ದು, ಕ್ರಮೇಣ ಕೆಂಪು ಬಣ್ಣಕ್ಕೆ ತಿರುಗುತ್ತವೆ. ತಳಿಯ ಎಲೆ ಮುಟುರು ರೋಗಕ್ಕೆ ನಿರೋಧಕ ಶಕ್ತಿ ಹೊಂದಿದ್ದು, ಪ್ರತೀ ಎಕರೆಗೆ 10 ಟನ್ ಇಳುವರಿ ಕೊಡುವ ಸಾಮರ್ಥ್ಯವಿದೆ ಎಂದು ತಿಳಿಸಿದರು.

ನಾಟಿಗೂ ಮುನ್ನ ಸಸಿಗಳನ್ನು ಟ್ರೈಕೋಡರ್ಮಾ ದ್ರಾವಣದಲ್ಲಿ ಉಪಚಾರ ಮಾಡಿದರೆ ಶಿಲೀಂಧ್ರ ರೋಗಗಳನ್ನು ನಿಯಂತ್ರಿಸಬಹುದು. ಜೊತೆಗೆ ಸಮಗ್ರ ಪೋಷಕಾಂಶಗಳ ನಿರ್ವಹಣೆಯಿಂದ ಉತ್ತಮ ಇಳುವರಿ ಪಡೆಯಲು ಸಾಧ್ಯವೆಂದು ತಿಳಿಸಿದರು.

ಬೇಸಾಯ ತಜ್ಞ ಬಿ.ಓ ಮಲ್ಲಿಕಾರ್ಜುನ್ ಮಾತನಾಡಿ, ತರಕಾರಿ ಬೆಳೆಗಳಲ್ಲಿ ಕಳೆ ನಿರ್ವಹಣೆ ಒಂದು ಸವಾಲಾಗಿರುತ್ತದೆ. ಆದ್ದರಿಂದ ಹೊದಿಕೆ ಶೀಟ್‌ಗಳನ್ನು ಬಳಸಿ ಇತ್ತೀಚೆಗೆ ರೈತರು ತರಕಾರಿಗಳನ್ನು ಬೆಳೆಯುತ್ತಿರುವುದು ಉತ್ತಮ ಅಭ್ಯಾಸವೆಂದರು.

ಭೇಟಿಯ ಸಂದರ್ಭದಲ್ಲಿ ರೈತರಾದ ನಾಗರಾಜ, ಗುರುಸಿದ್ದನಗೌಡ ನಿಂಗಪ್ಪ ಮತ್ತಿತರರು ಹಾಜರಿದ್ದರು.

# ನಾಳೆ ಲಿಂ. ರಂಭಾಪುರಿ ಜಗದ್ಗುರುಗಳ ಮೂರ್ತಿ ಪ್ರತಿಷ್ಠಾಪನೆಗೆ ಭೂಮಿ ಪೂಜೆ



**ರಾಣೇಬೆನ್ನೂರು**

ರಾಣೇಬೆನ್ನೂರು, ಅ.22- ತಾಲ್ಲೂಕಿನ ಕೋಡಿಯಾಲ-ಹೊಸಪೇಟೆ ಪುಣ್ಯಕೋಟಿ ಮಠದ ತಪೋ ಮಂದಿರದ ಮೇಲ್ಭಾಗದಲ್ಲಿ ರಂಭಾಪುರಿ ಲಿಂಗೈಕ್ಯ ಜಗದ್ಗುರು ಶ್ರೀ ವೀರಗಂಗಾಧರ ಭಗವತ್ಪಾದರ 36 ಅಡಿ ಎತ್ತರದ ಸಿಮೆಂಟ್ ಮೂರ್ತಿ ಹಾಗೂ ತುಂಗಭದ್ರಾ ನದಿಗೆ ತಡೆ ಗೋಡೆ ನಿರ್ಮಾಣದ ಶಂಕುಸ್ಥಾಪನೆ ಕಾರ್ಯಕ್ರಮವು ನಾಡಿದ್ದು ದಿನಾಂಕ 24 ರ ಗುರುವಾರ ನಡೆಯಲಿದೆ.

ಮುಕ್ತಿ ಮಂದಿರದ ಶ್ರೀ ವಿಮಲ ರೇಣುಕ ವೀರ ಮುಕ್ತಿಮುನಿ ಸ್ವಾಮೀಜಿ, ನೆಗಳೂರು ಶ್ರೀ ಗುರುಶಾಂತಲಿಂಗ ಸ್ವಾಮೀಜಿ ಹಾಗೂ ಕಡೆನಂದಿಹಳ್ಳಿ ಶ್ರೀ ರೇವಣಸಿದ್ದೇಶ್ವರ ಸ್ವಾಮಿಗಳು ಸಾನ್ನಿಧ್ಯ ವಹಿಸುವರು.

ಶಾಸಕ ಪ್ರಕಾಶ ಕೋಳಿವಾಡ ಶಂಕುಸ್ಥಾಪನೆ ನೆರವೇರಿಸುವರು. ಗ್ರಾಪಂ ಅಧ್ಯಕ್ಷರಾದ ಗೀತಾ ಶಿವಮೊಗ್ಗ ಅಧ್ಯಕ್ಷತೆ ವಹಿಸುವರು. ಶಾಸಕರಾದ ಬಿ.ಪಿ. ಹರೀಶ್, ಎಸ್.ವಿ. ಸಂಕನೂರ, ಮಾಜಿ ಸಚಿವರಾದ ಕೆ.ಎಸ್. ಈಶ್ವರಪ್ಪ, ಆರ್. ಶಂಕರ, ಮಾಜಿ ಶಾಸಕರಾದ ಅರುಣ ಪೂಜಾರ, ಎಚ್.ಎಸ್. ಶಿವಶಂಕರ, ಜೆ.ಡಿ.ಎಸ್ ಜಿಲ್ಲಾಧ್ಯಕ್ಷ ಮಂಜುನಾಥ ಗೌಡಶಿವಣ್ಣನವರ, ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ಮತ್ತಿತರರು ಪಾಲ್ಗೊಳ್ಳುವರು.

# ನಗರದಲ್ಲಿ ಇಂದು ವೀರ ರಾಣಿ ಕಿತ್ತೂರು ಚೆನ್ನಮ್ಮ ಜಯಂತ್ಯುತ್ಸವ, ಬೈಕ್ ರ್‍ಯಾಲಿ

ದಾವಣಗೆರೆ, ಅ. 22- ಜಿಲ್ಲಾ ಲಿಂಗಾಯತ ಪಂಚಮಸಾಲಿ ಸಮಾಜದ ವತಿಯಿಂದ ನಾಳೆ ದಿನಾಂಕ 23 ರ ಬುಧವಾರ ರಾಷ್ಟ್ರಮಾತೆ ವೀರರಾಣಿ ಕಿತ್ತೂರು ಚೆನ್ನಮ್ಮನವರ 200 ನೇ ವಿಜಯೋತ್ಸವ, 246 ನೇ ಜಯಂತ್ಯುತ್ಸವ ಸಮಾರಂಭ ನಡೆಯಲಿದೆ ಎಂದು ಸಮಾಜದ ಜಿಲ್ಲಾಧ್ಯಕ್ಷ ಅಶೋಕ್ ಗೋಪನಾಳ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ನಾಳೆ ಬುಧವಾರ ಬೆಳಿಗ್ಗೆ 9.30 ಕ್ಕೆ ನಗರದ ಎಸ್.ಎಸ್. ಹೈಟೆಕ್ ಆಸ್ಪತ್ರೆಯ ಹಿಂಭಾಗದಲ್ಲಿರುವ ಗಾಂಧಿ ಭವನದಲ್ಲಿ ಚೆನ್ನಮ್ಮಾಜಿ ಭಾವಚಿತ್ರಕ್ಕೆ ಜಿಲ್ಲಾಡಳಿತದ ವತಿಯಿಂದ ಮಾಲಾರ್ಪಣೆ ಮಾಡಿದ ನಂತರ ಪಂಚಮಸಾಲಿ ಯುವಕರ ಪಡೆಯ ಬೃಹತ್ ಬೈಕ್ ರ್‍ಯಾಲಿಗೆ ಚಾಲನೆ ನೀಡಲಾಗುವುದು ಎಂದು ಹೇಳಿದರು.

ಗಾಂಧಿ ಭವನದಿಂದ ಆರಂಭವಾಗುವ ಬೈಕ್ ರ್‍ಯಾಲಿಯು ರಾಜ ಬೀದಿಗಳ ಮೂಲಕ, ಜಿಲ್ಲಾಡಳಿತ ಹಾಗೂ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜದ ಸಂಯುಕ್ತಾಶ್ರಯದಲ್ಲಿ ಬೆಳಿಗ್ಗೆ 11 ಗಂಟೆಗೆ ಸಭಾ ಕಾರ್ಯಕ್ರಮ ಏರ್ಪಾಡಾಗಿರುವ ಕುವೆಂಪು ಕನ್ನಡ ಭವನ ತಲುಪಲಿದೆ ಎಂದು ವಿವರಿಸಿದರು.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾಧಿಕಾರಿ ಜಿ.ಎಸ್. ಗಂಗಾಧರಸ್ವಾಮಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಜಿ.ಪಂ. ಸಿಇಓ ಸುರೇಶ್ ಇಟ್ನಾಳ್, ಪಾಲಿಕೆ ಆಯುಕ್ತರಾದ ರೇಣುಕ, ದೂಡಾ ಆಯುಕ್ತ ಹುಲ್ಮನಿ ತಿಮ್ಮಣ್ಣ ಸೇರಿದಂತೆ ಇತರರು ಆಗಮಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಹೆಚ್.ಎಸ್. ಯೋಗೇಶ್, ಮಂಜು ಪೈಲ್ವಾನ್, ಕೊಟ್ರಗೌಡ ಕ್ಯಾರಕಟ್ಟೆ, ಎನ್.ಎಸ್. ಆನಂದ್, ಶಂಕರ್ ಎಪಿಎಂಸಿ, ಆನಂದ್ ಜಿರ್ಲಿ ಮತ್ತಿತರರು ಉಪಸ್ಥಿತರಿದ್ದರು.

# ನ್ಯಾ. ಸದಾಶಿವ ಆಯೋಗ ಜಾರಿಗಾಗಿ ಆಗ್ರಹಿಸಿ ತಮಟೆ - ಉರುಮೆ ಚಳುವಳಿ



**ಜಗಳೂರು**

ಜಗಳೂರು, ಅ.22- ಶೀಘ್ರದಲ್ಲಿಯೇ ನ್ಯಾ. ಸದಾಶಿವ ಆಯೋಗದ ಒಳಮೀಸಲಾತಿಯನ್ನು ಜಾರಿಗೊಳಿಸಲು ಆಗ್ರಹಿಸಿ, ಪರಿಶಿಷ್ಟ ಜಾತಿ ಹೊಲೆಮಾದಿಗರ ಹೋರಾಟ ಸಮಿತಿ ವತಿಯಿಂದ ತಮಟೆ, ಉರುಮೆ ಚಳುವಳಿ ನಡೆಸಲಾಯಿತು.

ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಹಾಕಿ ನಂತರ ಹೊರಟ ಪ್ರತಿಭಟನಾ ಮೆರವಣಿಗೆ ಪ್ರಮುಖ ಬೀದಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸುಪ್ರಿಂ ಕೋರ್ಟ್ ಆದೇಶ ಪಾಲನೆಗೆ ಒತ್ತಾಯಿಸಿ, ಘೋಷಣೆ ಕೂಗುತ್ತಾ ತಾಲ್ಲೂಕು ಕಛೇರಿ ಮುಂಭಾಗ ಜಮಾಯಿಸಿ, ನಂತರ ತಹಶೀಲ್ದಾರ್ ಮುಖಾಂತರ ಸರ್ಕಾರಕ್ಕೆ ಲಿಖಿತ ಮನವಿ ಸಲ್ಲಿಸಲಾಯಿತು.

ಮಾದಿಗ ಸಮಾಜದ ಹಿರಿಯ ಮುಖಂಡ ಜಿ.ಹೆಚ್.ಶಂಭುಲಿಂಗಪ್ಪ ಮಾತನಾಡಿ, ಪರಿಶಿಷ್ಟ ಜಾತಿ ಮಾದಿಗ ಸಂಬಂಧಿತ ಜಾತಿಗಳು ಹಲವು ವರ್ಷಗಳಿಂದ ಒಳಮೀಸಲಾತಿ ಜಾರಿಗೆ ನಿರಂತರ ಹೋರಾಟ ನಡೆಸುತ್ತಾ ಬಂದಿದ್ದರೂ ಸಹ ಅಸ್ಪೃಶ್ಯರ ಹಕ್ಕಿನ ಹೋರಾಟವನ್ನು ಹತ್ತಿಕ್ಕುವ ಹುನ್ನಾರ ನಡೆಸುತ್ತಿರುವುದು ಖಂಡನೀಯ ಎಂದರು.

ಸುಪ್ರೀಂ ಕೋರ್ಟ್ ಆದೇಶವನ್ನು ಹರಿಯಾಣ ಸರ್ಕಾರ ಜಾರಿಗೊಳಿಸಿದಂತೆ ಕರ್ನಾಟದ ಮುಖ್ಯಮಂತ್ರಿ ಸಿದ್ದರಾಮಯ್ಯನವರೂ ಹರಿಯಾಣ ಮಾದರಿ ಆದೇಶ ಪಾಲಿಸಬೇಕು. ಇಂದು ಸಾಂಕೇತಿಕವಾಗಿ ತಮಟೆ, ಉರುಮೆ ಚಳುವಳಿ ನಡೆಸಲಾಗಿದೆ. ಶೀಘ್ರ ಒಳಮೀಸಲಾತಿ ಜಾರಿಯಾಗದಿದ್ದರೆ ಛಲವಾದಿ ಮಾದಿಗ ಸಮುದಾಯಗಳಿಂದ ಒಕ್ಕೊರಲಿನ ಉಗ್ರ ಸ್ವರೂಪದ ಹೋರಾಟ ರೂಪಿಸಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಹೊಲೆ ಮಾದಿಗರ ಒಳಮೀಸಲಾತಿ ಹೋರಾಟ ಸಮಿತಿಯ ವೀರಸ್ವಾಮಿ, ಓಬಣ್ಣ, ಸಿ.ನಿಜಲಿಂಗಪ್ಪ, ಗೌರಿಪುರ, ಕುಬೇರಪ್ಪ, ತುಪ್ಪದಹಳ್ಳಿ ಸಿದ್ದಪ್ಪ, ಸತೀಶ್, ಗುತ್ತಿದುರ್ಗ ರುದ್ರೇಶ್, ಮುನಿಯಪ್ಪ, ಮರೇನಹಳ್ಳಿ ಹೊನ್ನೂರಪ್ಪ, ಮಲೆಮಾಚಿಕೆರೆ ಸತೀಶ್, ಕುಬೇಂದ್ರಪ್ಪ, ದುರುಗಣ್ಣ, ತಿಮ್ಮಣ್ಣ, ಶಾಂತಕುಮಾರ್ ಮುಂತಾದವರು ಭಾಗವಹಿಸಿದ್ದರು.

# ನಗರ, ಗ್ರಾಮೀಣ ಭಾಗದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸರಸ್ವತಿ ಬಡಾವಣೆ ಎ. ಬಿ ಮತ್ತು ಸಿ ಬ್ಲಾಕ್, ಜೀವನ್ ಭೀಮಾನಗರ, ಚಿಕ್ಕಮ್ಮಣಿ ದೇವರಾಜ ಅರಸು ಬಡಾವಣೆ, ಜಯನಗರ ಎ ಮತ್ತು ಬಿ ಬ್ಲಾಕ್, ಎಸ್. ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಸಾಯಿ ಬಾಬಾ ದೇವಸ್ಥಾನದ ಸುತ್ತಮುತ್ತ, ಲಕ್ಷ್ಮಿ ಬಡಾವಣೆ ಸುತ್ತ-ಮುತ್ತಲಿನ ಪ್ರದೇಶಗಳು.

ದೂರದರ್ಶನ ಕೇಂದ್ರ, ಮಹಾನಗರ ಪಾಲಿಕೆ ನೀರು ಸರಬರಾಜು ಘಟಕಗಳು, ಸರ್ಕ್ಯೂಟ್ ಹೌಸ್, ಭೂಸೇನಾ ನಿಗಮ, ಜಿಲ್ಲಾ ಪಂಚಾಯತ್ ಕಚೇರಿ, ಇಂಡಸ್ಟ್ರಿಯಲ್ ಏರಿಯಾ ಲೋಕಿಕೆರೆ ರಸ್ತೆ, ಸುಬ್ರಹ್ಮಣ್ಯನಗರ, ಎಸ್.ಎ.ರವೀಂದ್ರನಾಥ ಬಡಾವಣೆ. ಶಿವಕುಮಾರಸ್ವಾಮಿ ಬಡಾವಣೆ 1 ಮತ್ತು 2ನೇ ಹಂತ, ಹದಡಿ ರಸ್ತೆ, ಸೇಂಟ್ ಜಾನ್ ಸ್ಕೂಲ್, ಐ.ಟಿ.ಐ. ಕಾಲೇಜು, ರಿಂಗ್‌ರಸ್ತೆ, ಶ್ರೀನಿವಾಸ ನಗರ, ತರಳಬಾಳು ಬಡಾವಣೆ.

ಯುಬಿಡಿಟಿ ಲೇಡಿಸ್ ಹಾಸ್ಟೆಲ್, ಜಮುನಾ ವಾಣಿಜ್ಯ ಮಳಿಗೆ, ಸವಿತಾ ಹೋಟೆಲ್, ವಿದ್ಯಾನಗರ, ತರಳಬಾಳು ಬಡಾವಣೆ ಗಾಂಧಿ ಮೂರ್ತಿ ವೃತ್ತದಿಂದ ಈಶ್ವರ ಪಾರ್ವತಿ ದೇವಸ್ಥಾನ ಹಾಗೂ ಸುತ್ತ ಮುತ್ತ.

ಎಸ್.ಓ.ಜಿ ಕಾಲೋನಿ ಎ, ಬಿ ಮತ್ತು ಸಿ ಬ್ಲಾಕ್, ಬುದ್ದ, ಬಸವ ಭೀಮ ನಗರ , ಕರ್ನಾಟಕ ಬೀಜ ನಿಗಮ ಹಾಗೂ ಸುತ್ತಮುತ್ತಲಿನ ಪ್ರದೇಶ.

ಸ್ವಾಮಿ ವಿವೇಕಾನಂದ ಬಡಾವಣೆ, ಎಲ್.ಐ.ಸಿ ಕಾಲೋನಿ, ಆಂಜನೇಯ ಬಡಾವಣೆ, ವಿನಾಯಕ ಬಡಾವಣೆ. 6ನೇ ಮತ್ತು 7ನೇ ಮೈಲಿಕಲ್ಲು, ಪಾಮೇನಹಳ್ಳಿ, ಬೆಳವನೂರು, ತುರ್ಚಘಟ್ಟ, ಹಳೇಬಿಸಲೇರಿ, ಹೊಸಬಿಸಲೇರಿ, ಜರಿಕಟ್ಟೆ, ಮುದಹದಡಿ, ಹಳೇಕುಂದವಾಡ, ಹೊಸಕುಂದವಾಡ, ಶಿರಮಗೊಂಡನ ಹಳ್ಳಿ, ನಾಗನೂರು, ಶಾಮನೂರು, ಜೆ.ಎಚ್ ಪಟೇಲ್ ಬಡಾವಣೆ. ಎನ್.ಕೆ ಬಡಾವಣೆ, ಜವಳಘಟ್ಟ, ಬನಶಂಕರಿ 2ನೇ ಬ್ಲಾಕ್ ಸುತ್ತಮುತ್ತ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಸಂಡೂರಿನಿಂದ ಸಂಸದ ತುಕಾರಾಂ ಪತ್ನಿ ಸ್ಪರ್ಧೆ

ಮೈಸೂರು, ಅ. 22 - ಸಂಡೂರು ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಕಾಂಗ್ರೆಸ್ ಪಕ್ಷದಿಂದ ಬಳ್ಳಾರಿ ಸಂಸದ ಇ. ತುಕಾರಾಂ ಅವರ ಪತ್ನಿ ಅನ್ನಪೂರ್ಣ ಅವರಿಗೆ ಟಿಕೆಟ್ ನೀಡಲಾಗುವುದು. ಈ ವಿಷಯ ತಿಳಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಶಿಗ್ಗಾಂವ್ ಹಾಗೂ ಚನ್ನಪಟ್ಟಣ ಕ್ಷೇತ್ರದ ಅಭ್ಯರ್ಥಿಗಳನ್ನು ನಂತರದಲ್ಲಿ ನಿರ್ಧರಿಸಲಾಗುವುದು ಎಂದಿದ್ದಾರೆ. ನವೆಂಬರ್ 13ರಂದು ರಾಜ್ಯದ 3 ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಲಿದೆ. ನಾಮಪತ್ರ ಸಲ್ಲಿಕೆಗೆ ಅಕ್ಟೋಬರ್ 25 ಕೊನೆಯ ದಿನವಾಗಿದೆ.




# ಭಾರತದ ಪ್ರಥಮ ಸ್ವಾತಂತ್ರ್ಯ ಹೋರಾಟಗಾರ್ತಿ ಕಿತ್ತೂರು ರಾಣಿ ಚನ್ನಮ್ಮ

ಭಾರತೀಯರಿಗೆ ಬ್ರಿಟೀಷರು ಹಲವು ಕಾನೂನುಗಳಿಂದ ಕಿರುಕುಳ ನೀಡಿ ದೇಶಿಯ ಸಂಸ್ಥಾನಗಳನ್ನು ತಮ್ಮ ಆಡಳಿತಕ್ಕೆ ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ಅವರ ಕಾನೂನುಗಳನ್ನು, ದಬ್ಬಾಳಿಕೆಯನ್ನು ಪ್ರತಿಭಟಿಸಿದ ದೇಶದ ಪ್ರಪ್ರಥಮ ಬಂಡಾಯಗಾರ್ತಿ, ಕರ್ನಾಟಕದ ವೀರರಾಣಿ ಕಿತ್ತೂರು ಚೆನ್ನಮ್ಮ. ಸ್ವಾತಂತ್ರ್ಯ ರಕ್ಷಣೆ, ನಾಡಿನ ಹಿತಕ್ಕಾಗಿ ಹೋರಾಡಿದ ಈ ಕನ್ನಡತಿಯ ಧೈರ್ಯ, ಸಾಹಸ ಸಮಸ್ತ ಕನ್ನಡಿಗರಿಗೆ ಅಭಿಮಾನದ ಸಂಗತಿ. ಎರಡು ನೂರು ವರ್ಷಗಳ ಹಿಂದೆ 1824 ರಲ್ಲಿ ತನ್ನ ಸಾಮ್ರಾಜ್ಯದ ರಕ್ಷಣೆಗಾಗಿ ಆಂಗ್ಲರ ವಿರುದ್ಧ ಯುದ್ಧ ಮಾಡಿ ಜಯವನ್ನು ಸಾಧಿಸಿದ್ದು ಸ್ಮರಿಸಿಕೊಳ್ಳುವ ಸಂಗತಿ. ಇಂತಹ ಹೋರಾಟಗಾರ್ತಿಯ ಸಂಸ್ಥಾನಕ್ಕೆ, ಅರಸೊತ್ತಿಗೆಗೆ ಸುದೀರ್ಘ ಇತಿಹಾಸವಿದೆ. ಹಿರೇಮಲ್ಲಶೆಟ್ಟಿ ಮತ್ತು ಚಿಕ್ಕಮಲ್ಲಶೆಟ್ಟಿ ಕ್ರಿ.ಶ. 1585ರಲ್ಲಿ ಕಿತ್ತೂರು ದೇಸಗತಿಯ ಅರಸು. ಕ್ರಿ.ಶ. 1772ರಿಂದ 1816 ರವರೆಗೆ ಕಿತ್ತೂರು ಸಂಸ್ಥಾನ ಆಳಿದ ಮಲ್ಲಸರ್ಜ ದೇಸಾಯಿ ಪ್ರಮುಖ. ಈ ಅರಸನಿಗೆ ಇಬ್ಬರು ಪತ್ನಿಯರು ರಾಣಿ ರುದ್ರವ್ವ ಮತ್ತು ರಾಣಿ ಚನ್ನಮ್ಮ.



**ಕಿತ್ತೂರು ರಾಣಿ ಚನ್ನಮ್ಮನ ಹಿನ್ನೆಲೆ**

ಬ್ರಿಟೀಷರಿಗೆ ಸಿಂಹಸ್ವಪ್ನವಾಗಿದ್ದ, ಎದೆಗಾರ್ತಿ, ಹೋರಾಟಗಾರ್ತಿ ಕಿತ್ತೂರು ರಾಣಿ ಚನ್ನಮ್ಮ ಅಕ್ಟೋಬರ್-23, 1778ರಲ್ಲಿ ಬೆಳಗಾವಿ ಸಮೀಪದ ಕಾಕತೀಯ ದೇಸಾಯಿ ಮನೆತನದಲ್ಲಿ ಜನಿಸಿದಳು. ಚಿಕ್ಕ ವಯಸ್ಸಿನಿಂದಲೇ ಕುದುರೆ ಸವಾರಿ, ಕತ್ತಿವರಸೆ, ಬಿಲ್ಲುಗಾರಿಕೆ ತರಬೇತಿ ಮತ್ತು ಶಿಕ್ಷಣ ಪಡೆದಳು. ಕನ್ನಡ, ಉರ್ದು, ಮರಾಠಿ ಭಾಷೆಯೊಂದಿಗೆ ಇಂಗ್ಲೀಷಿನ ವ್ಯವಹಾರಿಕ ಜ್ಞಾನ ಇವರಿಗಿತ್ತು. ರಾಜಮಲ್ಲಸರ್ಜ ಅರಸನೊಂದಿಗೆ 15ನೇ ವಯಸ್ಸಿನಲ್ಲಿ ವಿವಾಹವಾದಳು. ಚೆನ್ನಮ್ಮನ ಪತಿ 1816ರಲ್ಲಿ ನಿಧನರಾದರು ನಂತರ ಶಿವಲಿಂಗ ಸರ್ಜನಿಗೆ ಪಟ್ಟಕಟ್ಟಲಾಯಿತು. 1824ರಲ್ಲಿ ಮಗನ ಮರಣ ಸಂಭವಿಸಿತು. ಕಿತ್ತೂರು ಸಂಸ್ಥಾನದ ಆಡಳಿತ ಭಾರ ನಡೆಸುವ ಹೊಣೆ ರಾಣಿ ಚನ್ನಮ್ಮನದಾಯಿತು.

**ಕಿತ್ತೂರು ಸಂಸ್ಥಾನಕ್ಕೆ ಆಂಗ್ಲರ ಕೆಂಗಣ್ಣು**

ಶಿವಲಿಂಗ ಸರ್ಜನಿಗೆ ಮಕ್ಕಳಾಗಲಿಲ್ಲ. ದತ್ತು ಪುತ್ರನನ್ನಾಗಿ ಶಿವಲಿಂಗಪ್ಪನನ್ನು ಉತ್ತರಾಧಿಕಾರಿ ಮಾಡಲು ಬ್ರಿಟೀಷರು ಒಪ್ಪಲಿಲ್ಲ. ಸುದೀರ್ಘ ಪತ್ರ ವ್ಯವಹಾರ ನಡೆದರೂ ಸಮಸ್ಯೆ ನಿವಾರಣೆ ಆಗಲಿಲ್ಲ. ಆಂಗ್ಲರ ವಿರುದ್ಧ ಹೋರಾಟ ಮಾಡಲು ರಾಣಿ ಚೆನ್ನಮ್ಮ ಸಿದ್ಧತೆ ಮಾಡಿಕೊಳ್ಳುವ ಸಂಗತಿ ಅರಮನೆಯ ಒಳಗಡೆಯ ಶತ್ರುಗಳಾದ, ಆಡಳಿತಾಧಿಕಾರಿಗಳಾದ ಮಲ್ಲಪ್ಪಶೆಟ್ಟಿ, ವೆಂಕಟರಾಯ ಮತ್ತಿತರು ಪ್ರತಿಯೊಂದು ಘಟನೆ, ಸಂಗತಿ, ರಹಸ್ಯ ಚಟುವಟಿಕೆಗಳ ಮಾಹಿತಿಯನ್ನು ಬ್ರಿಟೀಷ್ ಅಧಿಕಾರಿಗಳಿಗೆ ತಿಳಿಸುತ್ತಿದ್ದರು. ಧಾರವಾಡದ ಕಲೆಕ್ಟರ್ ಆಗಿದ್ದ ಥ್ಯಾಕರೆಯ ನೇತೃತ್ವದಲ್ಲಿ ಆಂಗ್ಲರ ಸೈನ್ಯ ಕಿತ್ತೂರು ಸಂಸ್ಥಾನಕ್ಕೆ 1824 ಅಕ್ಟೋಬರ್-21ರಂದು ಮುತ್ತಿಗೆ ಹಾಕಿತು. ಎರಡು ದಿನದ ನಂತರ ದಿನಾಂಕ: 23ರಂದು ಕೋಟೆಯ ಹೆಬ್ಬಾಗಿಲನ್ನು ಫಿರಂಗಿ ಹಾರಿಸಿ ತೆರೆದ ಬ್ರಿಟಿಷ್ ಸೈನ್ಯ ಸಂಸ್ಥಾನದೊಳಗೆ ನುಗ್ಗಲು ಯತ್ನಿಸಿತು.

**ಬ್ರಿಟೀಷರ ವಿರುದ್ಧ ರಾಣಿ ಚನ್ನಮ್ಮಗೆ ಜಯ**

ರಾಣಿ ಚನ್ನಮ್ಮರ ಪರಾಕ್ರಮ, ಧೈರ್ಯ ಮತ್ತು ಹೋರಾಟದಲ್ಲಿ ಆಂಗ್ಲರ ವಿರುದ್ಧ ವಿಜಯ ಸಾಧಿಸಿದಳು. 'ಕ್ಯಾಪ್ಟನ್‌ಬ್ಲಾಕ್' ಎಂಬುವನು ಕೋಟೆಯ ಮೇಲೆ ಫಿರಂಗಿ ಹಾರಿಸುತ್ತಿದ್ದಂತೆಯೇ ರಾಣಿ ಚೆನ್ನಮ್ಮನ ಯೋಧ ಅಮಟೂರ ಬಾಳಪ್ಪ ಕೋಟೆಯ ಮೇಲಿಂದ ಹಾರಿಸಿದ ಗುಂಡು ಕಲೆಕ್ಟರ್ ಥ್ಯಾಕರೆಗೆ ಬಡಿದು, ಉರುಳಿ ಬಿದ್ದು ಮೃತಪಟ್ಟನು. ಬ್ರಿಟೀಷ್ ಸೈನ್ಯ ದಿಕ್ಕಾಪಾಲಾಗಿ ಓಡಿಹೋಯಿತು. ಸೈನ್ಯದ ಕ್ಯಾಪ್ಟನ್ ಬ್ಲಾಕ್ ಹಾಗೂ ಇತರೆ ಅಧಿಕಾರಿಗಳು ಯುದ್ಧದಲ್ಲಿ ಮಡಿದರು. ಬ್ರಿಟೀಷ್ ಸೈನಿಕರು ಕಿತ್ತೂರಿನ ಯೋಧರಿಗೆ ಸೆರೆಸಿಕ್ಕರು, ಬ್ರಿಟೀಷ್ ಪಡೆಗಳು ಸೋತವು. ಸೆಂಟ್ ಜಾನ್ ಥ್ಯಾಕ್ರೆ, ಕಲೆಕ್ಟರ್ ಮತ್ತು ರಾಜಕೀಯ ಏಜೆಂಟ್ ಯುದ್ಧದಲ್ಲಿ ಮರಣ ಹೊಂದಿದರು. ಸಾಮಾನ್ಯ ಸಣ್ಣ ಸಂಸ್ಥಾನದ 'ಮಹಿಳೆ'ಯ ಸೈನ್ಯಕ್ಕೆ ಆಂಗ್ಲರ ಮಹಾನ್ ಸಾಮ್ರಾಜ್ಯದ ಸೈನ್ಯ ಸೋಲುವುದೆಂದರೇನು? ರಾಣಿ ಚೆನ್ನಮ್ಮನಿಂದ ಬ್ರಿಟಿಷರಿಗೆ ಆದ ಅವಮಾನ, ಸಾವುಗಳನ್ನು ಸವಾಲಾಗಿ ಸ್ವೀಕರಿಸಿದ ಆಂಗ್ಲರು ಕಿತ್ತೂರು ಸಂಸ್ಥಾನವನ್ನು ಬಗ್ಗು ಬಡಿಯುವ ತೀರ್ಮಾನಕ್ಕೆ ಬಂದರು.

**ಆಂಗ್ಲರಿಗೆ ಸೆರೆಸಿಕ್ಕ ರಾಣಿಚನ್ನಮ್ಮ**

ರಾಣಿಚನ್ನಮ್ಮನ ವಿಜಯ ಆಂಗ್ಲರಿಗೆ ಭಾರೀ ಮುಖಭಂಗವಾಯಿತು. ದೇಶದ ಪ್ರಥಮ ಸ್ವಾತಂತ್ರ್ಯ ಸಮರಕ್ಕೆ ಕನ್ನಡದ ರಾಣಿಯಿಂದ ಮೊದಲ ಜಯಸಿಕ್ಕಿತು. ಈ ಸಂತಸ, ವಿಜಯೋತ್ಸವ ಬಹಳ ದಿನ ಮುಂದುವರಿಯದೇ ಒಂದೆರಡು ತಿಂಗಳಲ್ಲಿ ಬೆಳಗಾವಿಯಿಂದ ಚಾಪ್ಲಿನ್ ನೇತೃತ್ವದಲ್ಲಿ ಭಾರಿ ಸಂಖ್ಯೆಯ ಸೈನ್ಯವೊಂದು ಕಿತ್ತೂರು ಸಂಸ್ಥಾನಕ್ಕೆ ನಾಲ್ಕು ದಿಕ್ಕುಗಳಿಂದ ಮುತ್ತಿಗೆ ಹಾಕಿತು. ಬ್ರಿಟೀಷರ ಆಧುನಿಕ ಶಸ್ತ್ರ ಹಾಗೂ ಫಿರಂಗಿಗಳ ಮುಂದೆ ನಮ್ಮ ದೇಶಿಯ ಆಯುಧಗಳು, ರಾಣಿ ಚನ್ನಮ್ಮಳ ಶಕ್ತಿ ಸಾಮರ್ಥ್ಯ ವಿಫಲವಾಯಿತು. ಈ ಎರಡನೆಯ ಯುದ್ಧದಲ್ಲಿ ರಾಣಿಚೆನ್ನಮ್ಮ ಹಾಗೂ ನಲ್ವತ್ತು ಸರದಾರರನ್ನು ಬಂಧಿಸಲಾಯಿತು. ನಂತರ ಸಂಗೊಳ್ಳಿ ರಾಯಣ್ಣ ಮುಂತಾದ ಶೂರರು ಹೋರಾಡಿದರೂ ನಾಡಿಗೆ ಸ್ವಾತಂತ್ರ್ಯ ದೊರಕಲಿಲ್ಲ.

**ಕಾರಾಗೃಹದಲ್ಲಿ ಸಾವನ್ನಪ್ಪಿದ ರಾಣಿ ಚನ್ನಮ್ಮ**

ಕಿತ್ತೂರು ಸೈನ್ಯಕ್ಕೆ ಸೋಲುಂಟಾಯಿತು ರಾಣಿಚನ್ನಮ್ಮ ಮತ್ತು ಸೊಸೆ ವೀರವ್ವ ಪಾರಾಗಲು ಮಾಡಿದ ಪ್ರಯತ್ನ ವಿಫಲವಾಯ್ತು. ಕಿತ್ತೂರಿನ ಹಲವಾರು ವೀರ ಯೋಧರು ಈ ಭೀಕರ ಕಾಳಗದಲ್ಲಿ ವೀರ ಮರಣವನ್ನಪ್ಪಿದರು. ಬ್ರಿಟೀಷ್ ಸರಕಾರ ಚನ್ನಮ್ಮ ಮತ್ತು ವೀರವ್ವಳನ್ನು ಬೈಲಹೊಂಗಲದ ಸೆರೆಮನೆಯಲ್ಲಿಟ್ಟು ಚಿತ್ರಹಿಂಸೆ ನೀಡಿದರು. ಕಿತ್ತೂರಿನ ಸ್ವಾತಂತ್ರ್ಯವನ್ನು ಮರಳಿ ಪಡೆಯುವ ಕನಸು ಕಾಣುತ್ತಾ ಸಂಗೊಳ್ಳಿ ರಾಯಣ್ಣನಂತ ವೀರಯೋಧರ ಜೊತೆಗೆ ಗುಪ್ತ ಸಂಪರ್ಕ ಇಟ್ಟುಕೊಂಡು ಹೋರಾಟದ ಸಂಚು ರೂಪಿಸುತ್ತಿದ್ದ, ಸಮಯ ಕಾಯುತ್ತಿದ್ದ ರಾಣಿ ಚನ್ನಮ್ಮ ಸೆರೆಮನೆಯಲ್ಲಿ ದುರ್ಬಲಳಾಗಿ, ಆರೋಗ್ಯ ಹದಗೆಟ್ಟು, ಮಾನಸಿಕವಾಗಿ ಕೊರಗುತ್ತಾ 1829 ಫೆಬ್ರವರಿ 21 ರಂದು ಸೆರೆಮನೆಯಲ್ಲಿ ನಿಧನಳಾದಳು. ರಾಣಿಗೆ 51 ವರ್ಷ ವಯಸ್ಸಾಗಿತ್ತು. ಅವರ ಪಾರ್ಥಿವ ಶರೀರದ ಅಂತ್ಯ ಸಂಸ್ಕಾರವು ಸಕಲ ಸೇನಾ ಮರ್ಯಾದೆಗಳೊಂದಿಗೆ ಬೈಲಹೊಂಗಲದ ಕಲ್ಮಠದಲ್ಲಿ ನಡೆಯಿತು.

**ಕನ್ನಡ ನಾಡಿನಲ್ಲಿ ಅಜರಾಮರ ರಾಣಿಚನ್ನಮ್ಮ**

ಆಂಗ್ಲರ ದಬ್ಬಾಳಿಕೆ, ನಮ್ಮವರ ವಂಚನೆ, ಮೋಸದಿಂದ ರಾಣಿ ಚೆನ್ನಮ್ಮ ತನ್ನ ಕಿತ್ತೂರು ಸಂಸ್ಥಾನವನ್ನು ಕಳೆದುಕೊಳ್ಳಬೇಕಾಯಿತು ಅವರ ಪರಾಕ್ರಮ ಎದೆಗಾರಿಕೆ, ಜನಪರ ಕಾಳಜಿಗಳು, ಸ್ವಾಭಿಮಾನ ಈ ನೆಲದಿಂದ 'ಎರಡುನೂರು' ವರ್ಷ ಕಳೆದರೂ ಇನ್ನು ಮರೆಯಾಗಿಲ್ಲ. ಭಾರತದ ಪ್ರಪ್ರಥಮ ಸ್ವಾತಂತ್ರ್ಯ ಹೋರಾಟಗಾರ್ತಿಯಾದ ಇವರು ನಮ್ಮವರ ಸಂಚಿನಿಂದಲೇ ಸೆರೆವಾಸ ಕಾಣಬೇಕಾಯಿತು. ಅರಮನೆಯ ಬಹುಭಾಗ ನಾಶವಾಗಿದ್ದರೂ ಅದರ ಭವ್ಯತೆ ಇಂದಿಗೂ ಎದ್ದು ಕಾಣುತ್ತದೆ. ಆಗಿನ ಕಾಲದ ಶ್ರೀಮಂತಿಕೆ, ಕಲಾವಂತಿಕೆಗಳು ಮೂಕ ಸಾಕ್ಷಿಗಳಾಗಿವೆ. ಚೆನ್ನಮ್ಮನ ಧೀರೋದಾತ್ತವಾದ ಹೋರಾಟದಿಂದ ಕಿತ್ತೂರು ಸ್ವಾತಂತ್ರ್ಯ ಸಂಗ್ರಾಮದ ಮೊದಲ ಹೆಜ್ಜೆ ಇಟ್ಟಿತೆಂಬ ಖ್ಯಾತಿ ಪಡೆದಿದೆ. ಹಲವು ಯುದ್ಧಗಳನ್ನು ಕಂಡು ವೀರ ಭೂಮಿಯಾಗಿದೆ. ಕಿತ್ತೂರಿನ ಕಥೆ ಲಾವಣಿಯಾಗಿ ಕಥೆಯಾಗಿ, ಬರಹದಲ್ಲಿ ಪ್ರಚುರಗೊಂಡು ಖ್ಯಾತ ನಾಮವಾಗಿದೆ.

**ವೀರ ರಾಣಿ ಚನ್ನಮ್ಮನ ಸವಿನೆನಪುಗಳು**

ರಾಣಿ ಚನ್ನಮ್ಮನ ನೆನಪಿಗಾಗಿ ಮಹಿಳೆಯರ ಸೈನಿಕ ಶಾಲೆ, ವಸ್ತು ಸಂಗ್ರಾಲಯ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿವೆ. 'ಕಿತ್ತೂರು' ಎಂಬ ಸ್ಥಳ ಚೆನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ಮುಂತಾದ ವೀರರ ಕಥೆಯನ್ನು ಹೇಳಲು ಅಲ್ಲಿ ಪಾಳು ಬಿದ್ದಿರುವ ಭವ್ಯಕೋಟೆಯ ಅವಶೇಷಗಳು ಇಂದಿಗೂ ನಿಂತಿವೆ. ರಾಣಿಚನ್ನಮ್ಮನ ಪ್ರತಿಮೆಯನ್ನು ಭಾರತದ ಸಂಸತ್ತಿನ ಸಂಕೀರ್ಣದಲ್ಲಿ ಸೆಪ್ಟೆಂಬರ್ 11-2007ರಂದು ಭಾರತದ ಮೊದಲ ಮಹಿಳಾ ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಅನಾವರಣಗೊಳಿಸಿದರು. ಬೆಂಗಳೂರು, ಬೆಳಗಾವಿ, ಕಿತ್ತೂರು ಮತ್ತು ಹುಬ್ಬಳಿಯಲ್ಲಿ ರಾಣಿಚನ್ನಮ್ಮನ ಪ್ರತಿಮೆಗಳಿವೆ. ಅಕ್ಟೋಬರ್-23-1977ರಲ್ಲಿ ಭಾರತ ಸರ್ಕಾರ ಅಂಚೆ ಚೀಟಿಯಲ್ಲಿ ರಾಣಿ ಚನ್ನಮ್ಮನ ಚಿತ್ರ ಬಿಡುಗಡೆ ಮಾಡಿತು. 1961ರಲ್ಲಿ ಕನ್ನಡದಲ್ಲಿ ಚಲನಚಿತ್ರವಾಯಿತು. ಭಾರತೀಯ ರೈಲ್ವೆ ಬೆಂಗಳೂರು ಮತ್ತು ಸಾಂಗ್ಲಿ ಸಂಪರ್ಕಿಸುವ ರೈಲ್ವೆಗೆ 'ರಾಣಿಚನ್ನಮ್ಮ ಎಕ್ಸ್‌ಪ್ರೆಸ್' ಎಂದು ಹೆಸರಿಸಲಾಯಿತು. ಅವರ ಸ್ಮರಣಾರ್ಥ ಬೆಳಗಾವಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ 'ರಾಣಿಚನ್ನಮ್ಮ' ಎಂದು ಹೆಸರಿಡಲಾಯಿತು. ಕಿತ್ತೂರು ರಾಣಿಚನ್ನಮ್ಮ ಭಾರತದ ವೀರ ಸ್ವಾತಂತ್ರ್ಯ ಹೋರಾಟಗಾರ್ತಿ ಇಂದಿಗೂ ನಮ್ಮಗಳ ಹೃದಯಗಳಲ್ಲಿ ಅಜರಾಮರರಾಗಿದ್ದಾರೆ. ಅವರ ಸವಿನೆನಪು ಸದಾ ಸ್ಮರಣೆಯವಾಗಿದೆ.



- ಡಾ. ಗಂಗಾಧರಯ್ಯ ಹಿರೇಮಠ
ವಿಶ್ರಾಂತ ಪ್ರಾಧ್ಯಾಪಕರು, ದಾವಣಗೆರೆ

## ಸಂಕಲ್ಪ ಸೇವಾ ಫೌಂಡೇಶನ್‌ನಿಂದ ಉಚಿತ ಹೃದಯ ತಪಾಸಣಾ ಶಿಬಿರ



ದಾವಣಗೆರೆ, ಅ.22- ನಗರದ ಸಂಕಲ್ಪ ಸೇವಾ ಫೌಂಡೇಶನ್ ಹಾಗೂ ಎಸ್.ಎಸ್. ನಾರಾಯಣ ಹಾರ್ಟ್ ಸೆಂಟರ್ ಇವರ ಸಹಯೋಗದಲ್ಲಿ ಎಸ್. ನಿಜಲಿಂಗಪ್ಪ ಬಡಾವಣೆಯ ಶ್ರೀ ಬಕ್ಕೇಶ್ವರ ಪ್ರೌಢಶಾಲೆಯಲ್ಲಿ ಉಚಿತ ಹೃದಯ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು.

ಉದ್ಘಾಟನೆಯನ್ನು ವಿರಕ್ತಮಠದ ಶ್ರೀ ಬಸವ ಪ್ರಭು ಸ್ವಾಮೀಜಿಯವರು ಎಕೋ ಮಷಿನ್ ಒತ್ತುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ನಂತರ ಮಾತನಾಡಿದ ಶ್ರೀಗಳು, ಸಂಕಲ್ಪ ಸೇವಾ ಸಂಸ್ಥೆಯು ಅನೇಕ ಸಮಾಜಮುಖಿ ಕೆಲಸಗಳನ್ನು ಮಾಡುತ್ತಿರುವುದು ಶ್ಲ್ಯಾಘನೀಯ. ಉಚಿತ ಹೃದಯ ತಪಾಸಣಾ ಶಿಬಿರಗಳಿಂದ ಅನೇಕ ಜನರಿಗೆ ಅನುಕೂಲವಾಗುತ್ತದೆ. ಅದೇ ರೀತಿ ಪರೀಕ್ಷೆ ಮಾಡುವಾಗ ಏನಾದರೂ ಹೃದಯ ಸಂಬಂಧಿ ಕಾಯಿಲೆ ಇದೆ ಎಂದು ಗೊತ್ತಾದರೆ ಮುಂಜಾಗ್ರತೆಯಾಗಿ ಚಿಕಿತ್ಸೆ ತೆಗೆದುಕೊಂಡು ಮುಂದಿನ ದಿನಗಳಲ್ಲಿ ಆರೋಗ್ಯವನ್ನು ಸುಧಾರಣೆಗೊಳಿಸಿಕೊಳ್ಳಲು ಇಂತಹ ಶಿಬಿರಗಳು ಅಗತ್ಯ ಎನಿಸುತ್ತವೆ ಎಂದು ತಮ್ಮ ಹಿತ ನುಡಿಗಳನ್ನು ನುಡಿದರು.

ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಪವಿತ್ರ ಹಾಗೂ ಸಂಸ್ಥೆಯ ಸಹಶಿಕ್ಷಕರು ಮತ್ತು ಸಂಕಲ್ಪ ಸೇವಾ ಸಂಸ್ಥೆಯ ಅಧ್ಯಕ್ಷ ಜಿ. ಮಹಾಂತೇಶ್ ಹಾಗೂ ಮುಖ್ಯ ಅತಿಥಿಗಳಾದ ನಾಗರಾಜ ಕೆ.ಜೆ., ಬಸವರಾಜ ಎಚ್.ಎಸ್. ಕಡ್ಲೆ ಬಾಳು, ವಕೀಲ ವೆಂಕಟೇಶ್ ಬೊಜ್ಜ ಹಾಗೂ ಸಂಸ್ಥೆಯ ಇತರೆ ಸದಸ್ಯರುಗಳಾದ ಯುಸೂಫ್, ಶಂಕರ್, ಗಿರೀಶ್ ಹೆಗಡೆ, ಶಿವಪ್ಪ ಎಂ., ಸುಹೇಲ್ ಎಂ, ಆನಂದ, ಹನುಮಂತ ಎಂ., ವಿನೋದ್, ಸಮೀರ್ ಸಿ. ಗುತ್ತಲ್ ಭಾಗವಹಿಸಿದ್ದರು

## ವಾಲ್ಮೀಕಿ ರಾಮಾಯಣದಿಂದಾಗಿ ಲೋಕ ಕಲ್ಯಾಣ

### ಜಿ.ಟಿ. ಕಟ್ಟೆ : ವಾಲ್ಮೀಕಿ ಜಯಂತಿಯಲ್ಲಿ ರಾಜನಹಳ್ಳಿ ಶ್ರೀಗಳ ಸಂತಸ

ಮಲೇಬೆನ್ನೂರು, ಅ.22- ಆದಿಕವಿ ಮಹರ್ಷಿ ವಾಲ್ಮೀಕಿ ಅವರು ರಚಿಸಿದ ರಾಮಾಯಣ ಮಹಾ ಕಾವ್ಯದಿಂದಾಗಿ ಲೋಕಕಲ್ಯಾಣವಾಗಿದೆ ಎಂದು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಸಂತಸ ವ್ಯಕ್ತಪಡಿಸಿದರು.



ಅವರು ಮಂಗಳವಾರ ಜಿ.ಟಿ.ಕಟ್ಟೆ ಗ್ರಾಮದಲ್ಲಿ ವಾಲ್ಮೀಕಿ ನಾಯಕ ಸಮಾಜದಿಂದ ಹಮ್ಮಿಕೊಂಡಿದ್ದ ವಾಲ್ಮೀಕಿ ಜಯಂತಿ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ತನ್ನ ಆತ್ಮ ಕಲ್ಯಾಣದ ಜೊತೆಗೆ ಲೋಕ ಕಲ್ಯಾಣಕ್ಕಾಗಿ ರಚಿಸಿದ ರಾಮಾಯಣದಲ್ಲಿ 24 ಸಾವಿರ ಶ್ಲೋಕಗಳಿದ್ದು, ಅಧಿಕಾರ, ಆಸ್ತಿಗಾಗಿ ಅಣ್ಣ ತಮ್ಮಂದಿರ ತ್ಯಾಗವನ್ನು ಈ ಮಹಾಕಾವ್ಯ ಜಗತ್ತಿಗೆ ತಿಳಿಸಿದೆ. ಅಧಿಕಾರ, ಆಸ್ತಿಗಾಗಿ ಅಣ್ಣ-ತಮ್ಮಂದಿರ ಜಗಳವನ್ನು ಮಹಾಭಾರತದಲ್ಲಿ ನಾವು ನೋಡಬಹುದು. ಈ ಎರಡೂ ಮಹಾಕಾವ್ಯಗಳು ನಮ್ಮ ಬದುಕನ್ನು ಅರ್ತಪೂರ್ಣಗೊಳಿಸಲು ಜಾಗೃತಿ ಮೂಡಿಸಿವೆ. ಜಗತ್ತಿಗೆ ರಾಮ-ಲಕ್ಷ್ಮಣ-ಸೀತಾ ಮಾತೆಯ ವ್ಯಕ್ತಿತ್ವ ತೋರಿಸಿಕೊಟ್ಟ ವಾಲ್ಮೀಕಿ ಅವರ ರಾಮಾಯಣ ಎಲ್ಲರ ಬದುಕಿಗೆ ದಾರಿದೀಪವಾಗಿದೆ. ಅಂತಹ ಮಹಾನ್ ಚೇತನ ವಾಲ್ಮೀಕಿ ಹೆಸರಿನಲ್ಲಿ ನಾಯಕ ಸಮಾಜ ಸಂಘಟನೆ ಹೋರಾಟದ ಮೂಲಕ ತಮ್ಮ ಸಾಂವಿಧಾನಿಕ ಹಕ್ಕುಗಳನ್ನು ಪಡೆದುಕೊಳ್ಳಬೇಕಿದೆ ಎಂದು ಸ್ವಾಮೀಜಿ ಯುವಕರನ್ನು ಎಚ್ಚರಿಸಿದರು.

ಶಾಸಕ ಬಿ.ಪಿ. ಹರೀಶ್ ಅವರು ವಾಲ್ಮೀಕಿ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ ಶುಭಾಶಯ ಕೋರಿದರು. ಮಾಜಿ ಶಾಸಕ ಎಸ್. ರಾಮಪ್ಪ ಮಾತನಾಡಿ, ಕೂಡಿ ಬಾಳಿದರೆ ಬದುಕು ಆದರ್ಶ ಎಂಬುದನ್ನು ವಾಲ್ಮೀಕಿ ರಾಮಾಯಣದಲ್ಲಿ ನಾವು ನೋಡಬಹುದೆಂದರು.

ಜಿ.ಪಂ. ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ ಮಾತನಾಡಿ, ರಾಮಾಯಣ ಮಹಾಕಾವ್ಯ ಇಡೀ ಜಗತ್ತಿಗೆ ಆದರ್ಶ, ಮೌಲ್ಯಗಳನ್ನು ತಿಳಿಸಿಕೊಟ್ಟಿದೆ. ಅಂತಹ ಮಹಾನ್ ದಾರ್ಶನಿಕರ ಜಯಂತಿಗಳನ್ನು ಆಚರಿಸುತ್ತಿರುವ ನಾವೇ ಧನ್ಯರು ಎಂದರು.

ಹರಿಹರ ತಾ. ಗ್ರಾ. ನಾಯಕ ಸಮಾಜದ ಅಧ್ಯಕ್ಷ ಜಿಗಳಿ ರಂಗಪ್ಪ ಮಾತನಾಡಿ, ವಾಲ್ಮೀಕಿ ಅವರು ರಾಮಾಯಣದ ಮೂಲಕ ರಾಮರಾಜ್ಯದ ಪರಿಕಲ್ಪನೆ ತೋರಿಸಿಕೊಟ್ಟಿದ್ದಾರೆ. ಅದನ್ನು ನಾವು ಜಾರಿಗೊಳಿಸಲು ಪ್ರಯತ್ನಿಸೋಣ ಎಂದರು.

ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಕಾಂಗ್ರೆಸ್ ಮುಖಂಡ ಗುತ್ತೂರು ಹಾಲೇಶ್‌ಗೌಡ ಮಾತನಾಡಿದರು.

ಗ್ರಾಮದ ಮುಖಂಡರಾದ ಟಿ. ರಾಮಪ್ಪ, ಸಿ. ಹೆಚ್. ಸಿದ್ದಪ್ಪ, ಟಿ. ಬಸಪ್ಪ, ಗ್ರಾ.ಪಂ. ಸದಸ್ಯರಾದ ಮಹೇಶ್, ಬೀರಪ್ಪ, ಎ. ಮಲ್ಲೇಶಪ್ಪ, ಕೆ.ಹೆಚ್. ಸೋಮಶೇಖರಪ್ಪ, ಟಿ. ಉಮ್ಮಣ್ಣ, ಗೌಡ್ರ ರಾಜಪ್ಪ, ಗೌಡ್ರ ಮಲ್ಲೇಶಪ್ಪ, ಗ್ರಾ.ಪಂ. ಮಾಜಿ ಸದಸ್ಯ ಮಲ್ಲಪ್ಪ, ಶಿವಮೂರ್ತೆಪ್ಪ, ಕೊಕ್ಕನೂರಿನ ಡಿ. ಸೋಮಶೇಖರ್, ಹೆಚ್.ನಾಗರಾಜ್, ದಾಸರ ಮಾರುತಿ, ಟಿ. ಹೆಚ್.ಮಲ್ಲೇಶ್ ಟಿ. ಹೆಚ್. ಹನುಮಂತ, ಕೆ.ಎನ್. ಹಳ್ಳಿಯ ಶಿವರಾಜ್, ಜಿಗಳಿ ಕ್ಯಾಂಪಿನ ಪ್ರಸಾದ್‌ರಾವ್, ಪತ್ರಕರ್ತ ಜಿಗಳಿ ಪ್ರಕಾಶ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದರು.

ಶ್ರೀಮತಿ ವಿದ್ಯಾ ಗಡದ್ ಕಾರ್ಯಕ್ರಮ ನಿರೂಪಿಸಿದರು. ಮಲ್ಲೇಶ್ ಸ್ವಾಗತಿಸಿದರು. ದೇವರಾಜ್ ವಂದಿಸಿದರು.

## ಹುಸಿ ಬಾಂಬ್ ಬೆದರಿಕೆಯಿಂದ 600 ಕೋಟಿ ರೂ. ನಷ್ಟ

ನವದೆಹಲಿ, ಅ. 22 - ಕಳೆದ 24 ಗಂಟೆಗಳಲ್ಲಿ ಸುಮಾರು 80 ವಿಮಾನಗಳಿಗೆ ಹುಸಿ ಬಾಂಬ್ ಬೆದರಿಕೆ ಎದುರಾಗಿದೆ. ಇದರಿಂದಾಗಿ ಸಾವಿರಾರು ಪ್ರಯಾಣಿಕರು ಸಮಸ್ಯೆ ಎದುರಿಸಬೇಕಾಯಿತು.

ಹುಸಿ ಬಾಂಬ್ ಬೆದರಿಕೆ ಕಾರಣದಿಂದಾಗಿ ವಿಮಾನಯಾನ ಸಂಸ್ಥೆಗಳು ಸುಮಾರು 600 ಕೋಟಿ ರೂ.ಗಳ ನಷ್ಟ ಅನುಭವಿಸಿವೆ ಎಂದು ವಿಮಾನಯಾನ ಸಂಸ್ಥೆಯ ಇಬ್ಬರು ಮಾಜಿ ಅಧಿಕಾರಿಗಳು ಅಂದಾಜಿಸಿದ್ದಾರೆ.

ಕಳೆದ 9 ದಿನಗಳಲ್ಲಿ ಭಾರತದಿಂದ ಕಾರ್ಯನಿರ್ವಹಿಸುವ 170 ವಿಮಾನಗಳಿಗೆ ಹುಸಿ ಬಾಂಬ್ ಬೆದರಿಕೆ ಎದುರಾಗಿದೆ. ಸಾಮಾಜಿಕ ಜಾಲತಾಣಗಳ ಮೂಲಕವೇ ಹೆಚ್ಚಿನ ಬೆದರಿಕೆ ಬಂದಿವೆ.

ಒಂದು ದೇಶೀಯ ವಿಮಾನಕ್ಕೆ ಅಡ್ಡಿ ಎದುರಾದಲ್ಲಿ 1.5 ಕೋಟಿ ರೂ. ನಷ್ಟವಾಗುತ್ತದೆ.

ಅಂತರರಾಷ್ಟ್ರೀಯ ವಿಮಾನಕ್ಕೆ ಅಡ್ಡಿಯಾದಲ್ಲಿ ಐದು ಕೋಟಿ ರೂ.ಗಳ ನಷ್ಟವಾಗುತ್ತದೆ ಎಂದು ದೇಶಿಯ ವಿಮಾನಯಾನ ಸಂಸ್ಥೆಯ ಹಣಕಾಸು ವಿಭಾಗದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಯೊಬ್ಬರು ಹೇಳಿದ್ದಾರೆ.

## ಮಳೆಯಿಂದ 31.25 ಲಕ್ಷ ರೂ. ಹಾನಿ

ದಾವಣಗೆರೆ, ಅ. 22 – ಜಿಲ್ಲೆಯಲ್ಲಿ ಸೋಮವಾರ 15.4 ಮಿ.ಮೀ. ಮಳೆಯಾಗಿದ್ದು, 31.25 ಲಕ್ಷ ರೂ.ಗಳ ನಷ್ಟವಾಗಿದೆ.

ಸೋಮವಾರದಂದು ಚನ್ನಗಿರಿ ತಾಲ್ಲೂಕಿನಲ್ಲಿ 11.1 ಮಿ.ಮೀ., ದಾವಣಗೆರೆಯಲ್ಲಿ 20.2 ಮಿ.ಮೀ., ಹರಿಹರದಲ್ಲಿ 10.2 ಮಿ.ಮೀ., ಹೊನ್ನಾಳಿಯಲ್ಲಿ 8.7 ಮಿ.ಮೀ., ಜಗಳೂರಿನಲ್ಲಿ 22.3 ಮಿ.ಮೀ. ಹಾಗೂ ನ್ಯಾಮತಿಯಲ್ಲಿ 15.4 ಮಿ.ಮೀ. ಮಳೆಯಾಗಿದೆ.

12 ಪಕ್ಕಾ ಮನೆಗೆ ತೀವ್ರ ಹಾನಿ ಹಾಗೂ 22 ಪಕ್ಕಾ ಮನೆಗಳಿಗೆ ಭಾಗಶಃ ಹಾನಿಯಾಗಿದೆ. 1 ಕಚ್ಚಾ ಮನೆಗೆ ತೀವ್ರ ಹಾಗೂ 30 ಕಚ್ಚಾ ಮನೆಗಳಿಗೆ ಭಾಗಶಃ ಹಾನಿಯಾಗಿದೆ.

## ರಾಷ್ಟ್ರೀಯ ಯೋಗ ಸ್ಪರ್ಧೆಗೆ ಕೆ.ವೈ. ಸೃಷ್ಟಿ ಆಯ್ಕೆ



ದಾವಣಗೆರೆ, ಅ.22- ಹಿಮಾಚಲ ಪ್ರದೇಶದ ಉನಾದಲ್ಲಿ ಅ.22ರಿಂದ ನಡೆಯುವ ರಾಷ್ಟ್ರೀಯ ಯೋಗ ಸ್ಪರ್ಧೆಗೆ ಕೆ.ವೈ ಸೃಷ್ಟಿ ಆಯ್ಕೆಯಾಗಿದ್ದಾರೆ.

ಅಂತರರಾಷ್ಟ್ರೀಯ ಹಾಗೂ ರಾಷ್ಟ್ರೀಯ ಯೋಗ ತೀರ್ಪುಗಾರರಾದ ಯೋಗಾಚಾರ್ಯ ವೈದ್ಯ ತೀರ್ಥರಾಜ್ ಹೋಲೂರ್ ಹಾಗೂ ಸುಮ ಹೋಲೂರ್ ಈ ಟೂರ್ನಿಗೆ ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಲಿದ್ದು, ಶಾಂಭವಿ ಅವರು ಬಾಲಕಿಯರ ತಂಡದ ವ್ಯವಸ್ಥಾಪಕಿಯಾಗಿದ್ದಾರೆ.

ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ವಾಸುದೇವ ರಾಯ್ಕರ್, ಪ್ರಕಾಶ್ ಉತ್ತಂಗಿ, ಪುಷ್ಪಾ ವಾಲಿ ಮತ್ತಿತರರು ಕ್ರೀಡಾಪಟು ಮತ್ತು ತಂಡಕ್ಕೆ ಶುಭ ಕೋರಿ ಬೀಳ್ಕೊಟ್ಟರು.


**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕ್ಲೀನಿಂಗ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
ಸಮಯ : ಮಧ್ಯಾಹ್ನ 3 ರಿಂದ ರಾತ್ರಿ 9.30
ಮೊ. 82176 84224

**ಬೇಕಾಗಿದ್ದಾರೆ**
ಬೆಲ್ಲದ ಟಿ ಶಾಪ್‌ನಲ್ಲಿ ಪಾರ್ಟ್ ಟೈಂ, ಫುಲ್ ಟೈಂ ಕೆಲಸಕ್ಕೆ ಯುವತಿಯರು ಬೇಕಾಗಿದ್ದಾರೆ.
RTO ಆಫೀಸ್ ಹತ್ತಿರ, ದಾವಣಗೆರೆ.
99648 88743

**ಗ್ಯಾಸ್ ಗೀಜರ್ ರಿಪೇರಿ**
We repair your all types of Gas Geyser.
Ratna Marketing
99019 40727

**ಫ್ಲ್ಯಾಟ್ ಲೀಸ್‌ಗೆ ಇದೆ**
ವಿದ್ಯಾನಗರ ಕಲ್ಲೇಶ್ವರ ಅಪಾರ್ಟ್‌ಮೆಂಟ್‌ನಲ್ಲಿ 2BHK ಫ್ಲ್ಯಾಟ್ ಲೀಸ್‌ಗೆ ಇವೆ. ಸಂಪರ್ಕಿಸಿ
99807 28533
80889 26131

**ಸೈಟು ಮಾರಾಟಕ್ಕಿದೆ**
54x40 ದಕ್ಷಿಣ ಮುಖ ಇ-ಸ್ವತ್ತು, ಡೋರ್ ನಂ. ಇರುವ ಸೈಟ್, ಹದಡಿ ರಸ್ತೆ, ಶ್ರೀನಿವಾಸ್ ನಗರ, 4ನೇ ಕ್ರಾಸ್, ದಾವಣಗೆರೆ.
83105 03746

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಅನುಭವವಿರುವ ಸಪ್ಲೈಯರ್ ಮತ್ತು ಕ್ಲೀನರ್ ಬೇಕಾಗಿದ್ದಾರೆ. ಜಯನಗರ 'ಬಿ' ಬ್ಲಾಕ್, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ದಾವಣಗೆರೆ. ಸಂಪರ್ಕಿಸಿ :
99861 62462, 97420 97140

**ಮನೆಗಳು ಲೀಸ್‌ಗಿವೆ**
1BHK ಆರ್ ಸಿ ಸಿ ನೆಲಮಹಡಿ/ 1ನೇ ಮಹಡಿ, ನಿಟುವಳ್ಳಿ, ಲೆನಿನ್ ನಗರ, ಲೀಸ್ ಮೊತ್ತ 2 ಲಕ್ಷ, 2BHK ಆರ್ ಸಿ ಸಿ 2ನೇ ಮಹಡಿ ಮನೆ, ಪೂರ್ವ ಬಾಗಿಲು, ದೇವರಾಜ ಅರಸ್ ಬಡಾವಣೆ, ದಾವಣಗೆರೆ ಲೀಸ್ ಮೊತ್ತ 5 ಲಕ್ಷ. ಬೋರ್‌ವೆಲ್ / ಕಾರ್ಪೊರೇಷನ್ ನೀರು, ಕಾರ್ ಪಾರ್ಕಿಂಗ್ ಸೌಲಭ್ಯ.
9741746205/ 7022643885

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಉದ್ಯೋಗಾವಕಾಶ**
ಅಂಗಡಿಯಲ್ಲಿ ಆಫೀಸ್ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವಿರುವ ಮಹಿಳೆಯರು-2
ಅಂಗಡಿಯಲ್ಲಿ ಕೆಲಸ ಮಾಡಲು SSLC/PUC ಪಾಸ್/ಫೇಲ್ ಆದ ಹುಡುಗರು-3 ಬೇಕಾಗಿದ್ದಾರೆ.
ಕಶೆಟ್ಟರ್ ಇಂಡಸ್ಟ್ರೀಯಲ್ ಎಸೆನ್ಸಿಯಲ್
ಲಾಯರ್ ರೋಡ್, ದಾವಣಗೆರೆ.

**WANTED LADY TEACHERS**
BA. B.Ed : 02
B.Sc. BEd : 02
BA.BEd - Hindi :02
Aya : 02.
Immediately contact to
Vinayaka Convent
Ganeshpet. Bhd kalikadevi temple dvg. or Vinayaka public school Kondajji Road. Dvg.
M : 95356 10817

**FIRST FLOOR SHOP FOR RENT**
For Office, Mini Bank, Ready Made Garment Shop, Beauty Parlour Etc., (with Wash Room Facility)
N.R. Road, Davangere.
94483 69523

**ಅಡಿಕೆ ತೋಟ ಮಾರಾಟಕ್ಕಿದೆ**
ದಾವಣಗೆರೆ ತಾಲ್ಲೂಕು ಕಾಡಜ್ಜಿ ಗ್ರಾಮದಲ್ಲಿ ಉತ್ತಮವಾಗಿ ನಿರ್ವಹಿಸಿ ಫಲಕ್ಕೆ ಬಂದಿರುವ ಅಡಿಕೆ ತೋಟ ಮಾರಾಟಕ್ಕಿದೆ.
ರಿ.ಸ.ನಂ.46/8 ರ 2 ಎಕರೆ, 113/5 ರ 1 ಎಕರೆ 04 ಗುಂಟೆ, 115/3 ರ 2 ಎಕರೆ 04 ಗುಂಟೆ, 114/3 ರ 1 ಎಕರೆ 22 ಗುಂಟೆ.
93800 76292

**ಅಡಿಕೆ ತೋಟ ಮಾರಾಟಕ್ಕಿದೆ**
ದಾವಣಗೆರೆ ತಾಲ್ಲೂಕು ಹಿರೇತೊಗಲೇರಿಯಲ್ಲಿ ಉತ್ತಮವಾಗಿ ನಿರ್ವಹಿಸಿರುವ ಫಲಕ್ಕೆ ಬಂದಿರುವ ಅಡಿಕೆ ತೋಟ ಮಾರಾಟಕ್ಕಿದೆ.
ರಿ.ಸ.ನಂ.97/7 ರ 3 ಎಕರೆ 26 ಗುಂಟೆ, 99/6 ರ 0.36 ಗುಂಟೆ, 53/12ರ 2 ಎಕರೆ 28 ಗುಂಟೆ.
93800 76292

**WANTED**
Male required for supervisor job and Girls required for Billing work at Food Mart Super Market.
Mob: 9886463531

**ಹಳ್ಳೂರು ಹಾಲಪ್ಪ & ಸನ್ಸ್ ಬಿಲ್ಡಿಂಗ್ ಮಾರಾಟಕ್ಕಿದೆ**
3 ಫ್ಲೋರ್ (15x95) NR ರೋಡ್, ಶಿರಡಿ ಸಾಯಿಬಾಬಾ ಲಾಂಡ್ರಿ ಪಕ್ಕ, ದಾವಣಗೆರೆ. ಹಳ್ಳೂರು ಮಂಜುನಾಥ್
91410 30300

**DOUBLE ROOMS ಮನೆ ಲೀಜ್‌ಗೆ ಇರುತ್ತದೆ**
ಎಲ್ಲಾ ಸೌಲಭ್ಯವುಳ್ಳ ಹೊಸ ಮನೆ ಲೀಜಿಗೆ ಇದೆ. ಕೊಂಡಜ್ಜಿ ರಸ್ತೆ, ವಿನಾಯಕ ಪಬ್ಲಿಕ್ ಸ್ಕೂಲ್ ಹಿಂಭಾಗ, ಅಶೋಕ ನಗರ, ದಾವಣಗೆರೆ.
Cell: 95356 10817, 74060 70957

**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ಮಂಡಿಪೇಟೆಯಲ್ಲಿರುವ ವಿಮಲೇಶ್ವರ ಬಂಗಾರದ ಅಂಗಡಿ ಮತ್ತು ಮಿರಜ್‌ಕರ್ ಟೆಕ್ಸ್‌ಟೈಲ್ಸ್ ಮಧ್ಯೆ ಇರುವ ಪ್ಯಾಸೇಜ್‌ಗೆ ಲಗತ್ತಾಗಿ, ಸುಮಾರು 2000 ಅಡಿ ಅಳತೆಯ ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ:
ಮೋಹನ್ ರಿಯಲ್ ಎಸ್ಟೇಟ್ ಏಜೆನ್ಸೀಸ್
ಮೊ. 9742434049

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಬೇಕಾಗಿದ್ದಾರೆ**
28 ವರ್ಷದೊಳಗಿನ ದಾವಣಗೆರೆ ನಿವಾಸಿ ನರ್ಸಿಂಗ್ / ಪದವೀಧರ ರಿಸೆಪ್ಷನಿಸ್ಟ್ / ಸಹಾಯಕ ಥೆರಪಿಸ್ಟ್ ಬೇಕಾಗಿದ್ದಾರೆ.
ನವಚೇತನ ವೆಲ್‌ನೆಸ್ ಸೆಂಟರ್
ಆಂಜನೇಯ ಬಡಾವಣೆ, ದಾವಣಗೆರೆ
99726 00713

**ಮಾರಾಟಕ್ಕೆ**
ಭಗೀರಥ ಸರ್ಕಲ್ ನಿಟ್ಟುವಳ್ಳಿ ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕೆ ಇವೆ. ಸಂಪರ್ಕಿಸಿ :
94484 39639

**COMPUTER OPERATOR REQUIRED FOR OFFICE WORK**
Tally prime, MS office, Kannada typing
94496 43555

**ಹುಡುಗರು ಬೇಕಾಗಿದ್ದಾರೆ**
ವಿದ್ಯಾನಗರದಲ್ಲಿ ಇರುವ ಕಿರಾಣಿ ಶಾಪ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಕೆಲಸದ ಸಮಯ ಬೆಳಿಗ್ಗೆ 10 ರಿಂದ ರಾತ್ರಿ 8.30 ರವರೆಗೆ. ಮಧ್ಯಾಹ್ನ ಊಟದ ಜೊತೆ ಟೀ ಮತ್ತು ಸ್ನ್ಯಾಕ್ಸ್ ವ್ಯವಸ್ಥೆ ಇದೆ. (11,000 ಸಂಬಳ). ಅನುಭವ ಇರುವವರಿಗೆ ಆದ್ಯತೆ
81340 34264, 81975 17215

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
81478 03755
70266 43088

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್‌ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿಯ ಸಮಯ ಸಂಜೆ 6.30ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯರಸ್ತೆ, ಪಿಜೆ ಬಡಾವಣೆ, ದಾವಣಗೆರೆ.

**ಬೆಂಗಳೂರಿನಲ್ಲಿ ಬೇಕಾಗಿದ್ದಾರೆ**
ಕಾರ್ ಡ್ರೈವರ್ ಕಮ್ ಸೆಕ್ಯೂರಿಟಿ ಆಟೋಮೆಟಿಕ್ ಗೇರ್ ಅನುಭವ ಇರಬೇಕು. ಸಂಬಳ 15000/- O.T. ಸಿಗುತ್ತದೆ. ವಸತಿ ಸೌಲಭ್ಯವಿದೆ.
97400 98047

**ಬೇಕಾಗಿದ್ದಾರೆ**
B.A., B.Ed., ಅಥವಾ B.A./B.Sc./B.Com ತರಬೇತಿ ಹೊಂದಿದ ಶಿಕ್ಷಕ/ಕಿಯರು ಹಿರಿಯ ಪ್ರಾಥಮಿಕ ತರಗತಿಗಳಿಗೆ ಬೋಧಿಸಲು ಬೇಕಾಗಿದ್ದಾರೆ
ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆ,
ದೇವರಾಜ ಅರಸು ಬಡಾವಣೆ,'ಸಿ' ಬ್ಲಾಕ್, 6ನೇ ಕ್ರಾಸ್, ಕೊಂಡಜ್ಜಿ ರಸ್ತೆ, ದಾವಣಗೆರೆ.
99640 17729

**ಮಳಿಗೆ ಬಾಡಿಗೆಗೆ**
ದೊಡ್ಡಪೇಟೆ ಮೇನ್ ರೋಡ್‌ಗೆ ಲಗತ್ತಾಗಿರುವ ಅಮರಾವತಿ ಹಾಲಪ್ಪನ ಅಂಗಡಿ ಹತ್ತಿರವಿರುವ 15x15= 225 ಜಾಗವುಳ್ಳ ಮಳಿಗೆ ಬಾಡಿಗೆಗೆ ಇದೆ.
Mob: 93433 73412, 98451 04109

**ವಧು-ವರರ ಮಾಹಿತಿ ಕೇಂದ್ರ, ಬಾಡಿಗೆಗಿದೆ**
25 ರಿಂದ 30 ವರ್ಷ ಗುಡ್ ವಿಲ್ ಇರುವ ವಧು-ವರರ ಮಾಹಿತಿ ಕೇಂದ್ರ ಬಾಡಿಗೆಗೆ ದೊರೆಯುತ್ತದೆ. ಕೇಂದ್ರದ ಇನ್‌ಸ್ಟ್ರುಮೆಂಟ್ ಮಾರಾಟಕ್ಕಿವೆ.
9886377115, 9964613440

**RAJASTHAN TOUR**
Dep: 29th NOV, Duration: 10 Days
Premium PKG Rs 59,600 pp
DVG WORLD TOURS
P J Exten, Davanagere.
99006 66122

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**HOUSE FOR SALE**
(brokers pls excuse)
East facing - built on 30*50 site
2 BHK- Ground Floor, 2 BHK- 1st Floor
2 BHK- 2nd Floor, Studio 1 BHK kitchen/attached bath room - 3rd Floor
Mahalakshmi Badavane, Davanagere.
99809 33002

**ಶ್ರೀ ಮಂಜುನಾಥ ಟ್ರೇಡರ್ಸ್**
SRI MANJUNATHA TRADERS
Wholesale Distributor for : Organic Plastic, Plastic Grocery Bags, VS Fabric Grocery Bags
# 1947/10, 8th main, 1st cross, Swamy Vivekanands Badavane, Davangere-5.
96325 48633

**ಹೊಸ ಮನೆ ಮಾರಾಟಕ್ಕಿದೆ**
ಮಹಾಲಕ್ಷ್ಮಿ ಬಡಾವಣೆಯಲ್ಲಿ 40x40 ಅಳತೆಯ ಪಶ್ಚಿಮ ದಿಕ್ಕಿನ ಮನೆ ಮಾರಾಟಕ್ಕಿದೆ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
81500 28457

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಮೊಬೈಲ್ ಶಾಪ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ:
ಎಂ.ಕೆ. ಕಮರ್ಷಿಯಲ್ಸ್
ಎನ್. ಆರ್. ರಸ್ತೆ, ದಾವಣಗೆರೆ.
ಮೊ. 98440-08003

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**ಉದ್ಯೋಗಾವಕಾಶ**
ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್‌ನಲ್ಲಿ ಹೋಂ ನರ್ಸಿಂಗ್ ಕೆಲಸ ಮಾಡಲು (ವಯೋವೃದ್ದರನ್ನು ನೋಡಿಕೊಳ್ಳಲು) ಮಹಿಳೆಯರು, ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 7th, 10th PUC, ANM, GNM, Any Degree ಉಚಿತ ಊಟ, ವಸತಿಯೊಂದಿಗ 18,000 ರೂ. ನಿಂದ 20,000 ರೂ. ಸಂಬಳವಿದೆ. ಆಸಕ್ತಿ ಇರುವವರು ಸಂಪರ್ಕಿಸಿ.
95355 32369

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ, ಹರಿಹರ, ಹರಪನಹಳ್ಳಿ, ಹೊನ್ನಾಳಿ, ಚನ್ನಗಿರಿ, ಜಗಳೂರು ಎಲೆಕ್ಟ್ರಾನಿಕ್ಸ್ ಸರ್ವೀಸ್ ಸೆಂಟರ್‌ನಲ್ಲಿ ಕೆಲಸ ಮಾಡಲು ITI, Diploma ಆದ ಸ್ವಂತ ದ್ವಿಚಕ್ರ ವಾಹನ ಹೊಂದಿರುವವರು ಮತ್ತು ಸಿಸ್ಟಂ ಆಪರೇಟರ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
9986394387, 08192 230103

**ಬೇಕಾಗಿದಾರೆ**
ರೈಸ್ ಮಿಲ್‌ಗೆ ಅನುಭವವುಳ್ಳ ಆಪರೇಟರ್‌ಗಳು, ಡ್ರೈವರ್‌ಗಳು ಬೇಕಾಗಿದ್ದಾರೆ.
96065 69596
97400 76554

**REQUIREMENT**
Marketing Exicutives (Experianced Candidates) for FMCG Products
THRIVE VENTURES
95906 07846
98866 76676

# ಒಳಮೀಸಲಾತಿ ವರ್ಗೀಕರಣ ತಿರಸ್ಕರಿಸಲು ಕುಳುವ ಸಂಘದ ಒತ್ತಾಯ

ದಾವಣಗೆರೆ, ಅ.22- ಅಸಮರ್ಥನೀಯ ಹಾಗೂ ಅತಾರ್ಕಿಕ ದತ್ತಾಂಶಗಳನ್ನು ಆಧರಿಸಿದ, ಒಳಮೀಸಲಾತಿ ವರ್ಗೀಕರಣವನ್ನು ಸಚಿವ ಸಂಪುಟ ಸಭೆಯಲ್ಲಿ ತಿರಸ್ಕರಿಸುವಂತೆ ಹಾಗೂ ಕಾಂತರಾಜು ಆಯೋಗದ ವರದಿಯನ್ನು ಬಹಿರಂಗ ಪಡಿಸುವಂತೆ ಅಖಿಲ ಕರ್ನಾಟಕ ಕುಳುವ ಮಹಾ ಸಂಘ (ಕೊರಮ - ಕೊರಚ - ಕೊರವ ಸಮುದಾಯಗಳ ಒಕ್ಕೂಟ) ಆಗ್ರಹಿಸಿದೆ.

ಪರಿಶಿಷ್ಟ ಜಾತಿಯ ಒಳಮೀಸಲಾತಿಯ ವರ್ಗೀಕರಣ ಸಂಬಂಧಿಸಿದಂತೆ ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯದ ಸಪ್ತ ಪೀಠವು ತೀರ್ಪು ನೀಡಿದ್ದು ಸರಿಯಷ್ಟೆ. ಈ ಬಗ್ಗೆ ರಾಜ್ಯ ಸರ್ಕಾರ ಪರಿಶಿಷ್ಟ ಜಾತಿಯ ಒಳಮೀಸಲಾತಿ ಕುರಿತಾಗಿ ಅವೈಜ್ಞಾನಿಕ, ಅತಾರ್ಕಿಕ ಹಾಗೂ ಅಸಮರ್ಥನೀಯ ದತ್ತಾಂಶಗಳನ್ನು ಆಧರಿಸಿ, ಒಳಮೀಸಲಾತಿ ವರ್ಗೀಕರಣಕ್ಕೆ ಮುಂದಾಗಿರುವುದು ಸಾಮಾಜಿಕ ನ್ಯಾಯದ ಕಗ್ಗೊಲೆಯಾಗಿದೆ ಎಂದು ಸಂಘದ ರಾಜ್ಯ ಸಮಿತಿ ಸದಸ್ಯರುಗಳಾದ ವಿರೂಪಾಕ್ಷಪ್ಪ ಪಂಡಿತ್ ಮತ್ತು ಎಂ.ಶೇಖರಪ್ಪ ಅಸಮಾಧಾನ ಹೊರಹಾಕಿದ್ದಾರೆ.

ಪರಿಶಿಷ್ಟ ಜಾತಿಯ 101 ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯ ಪ್ರಾತಿನಿಧ್ಯ ಕುರಿತಾದ ಸಮಗ್ರ ಹಾಗೂ ವಸ್ತುನಿಷ್ಠ ಅಂಕಿ - ಅಂಶಗಳ ಕುರಿತಾದ ಕೊರತೆ ಇದ್ದು, ಈ ಬಗ್ಗೆ ವೈಜ್ಞಾನಿಕ ಅಧ್ಯಯನ ಕೈಗೊಳ್ಳದೆ, ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಒತ್ತಡಕ್ಕೆ ಮಣಿದು ಏಕಾಏಕಿ ಒಳಮೀಸಲಾತಿ ವರ್ಗೀಕರಣ ಕುರಿತಾಗಿ ಏಕಪಕ್ಷೀಯ ನಿರ್ಧಾರಗಳನ್ನು ಕೈಗೊಳ್ಳಲು ಹೊರಟಿರುವ ರಾಜ್ಯ ಸರ್ಕಾರದ ನಡೆಯನ್ನು ಅಖಿಲ ಕರ್ನಾಟಕ ಕುಳುವ ಮಹಾಸಂಘವು ತೀವ್ರವಾಗಿ ಖಂಡಿಸುತ್ತದೆ ಎಂದಿದ್ದಾರೆ.

ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನ್ವಯ ರಾಜ್ಯದಲ್ಲಿರುವ ಪರಿಶಿಷ್ಟ ಜಾತಿಯಗಳ ನಡುವೆ ಒಳಮೀಸಲಾತಿ ಕಲ್ಪಿಸಲು ರಾಜ್ಯದಲ್ಲಿ 101 ಪರಿಶಿಷ್ಟ ಜಾತಿಗಳ ನಡುವಿನ ಮೀಸಲಾತಿ ಹಂಚಿಕೆಯ ಕುರಿತಾದ ಸಮಗ್ರ ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಪ್ರಾತಿನಿಧ್ಯವನ್ನು ಖಾತ್ರಿಪಡಿಸಲು ಸಮರ್ಥನೀಯ ಹಾಗೂ ವೈಜ್ಞಾನಿಕ ದತ್ತಾಂಶಗಳನ್ನು ಕ್ರೋಢಿಕರಿಸಿ, ವಿಶ್ಲೇಷಿಸಿ ತಜ್ಞರ ವರದಿಯನ್ನು ಪಡೆದುಕೊಳ್ಳದ ಹೊರತು, ಸರ್ಕಾರವು ಯಾವುದೇ ಕ್ರಮವನ್ನು ಕೈಗೊಳ್ಳಬಾರದೆಂದು ಒತ್ತಾಯಿಸಿದ್ದಾರೆ.

# ಒಳ ಮೀಸಲಾತಿಗೆ ಆಗ್ರಹಿಸಿ ಇಂದು ನಗರದಲ್ಲಿ ಮಾದಿಗ - ಛಲವಾದಿ ಸಮುದಾಯದ ಪ್ರತಿಭಟನೆ

ಸರ್ವೋಚ್ಚ ನ್ಯಾಯಾ ಲಯದ ತೀರ್ಪಿನ ಆದೇಶದಂತೆ ಒಳ ಮೀಸಲಾತಿ ಜಾರಿಗೊಳಿಸಬೇಕೆಂದು ಆಗ್ರಹಿಸಿ ಇಂದು ಬೆಳಿಗ್ಗೆ 10ಕ್ಕೆ ಬೃಹತ್ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳ ಲಾಗಿದೆ ಎಂದು ಜಿಲ್ಲಾ ಮಾದಿಗ, ಛಲವಾದಿ ಸಮುದಾಯಗಳ ಒಕ್ಕೂಟದ ಪ್ರಮುಖರಾದ ನಿವೃತ್ತ ಪೊಲೀಸ್ ಎಸ್ಪಿ ರವಿನಾರಾಯಣ್ ತಿಳಿಸಿದ್ದಾರೆ. ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಪ್ರಾರಂಭ ವಾಗುವ ಪ್ರತಿಭಟನಾ ಮೆರವಣಿಗೆ ರಾಜ ಬೀದಿ ಗಳಲ್ಲಿ ಸಂಚರಿಸಲಿದೆ.

# ಪಾಕ್ ಪರ ಘೋಷಣೆ : 21 ಬಾರಿ ಭಾರತ್ ಮಾತಾ ಕಿ ಜೈ ಎನ್ನಲು ತಿಳಿಸಿದ ಹೈಕೋರ್ಟ್

ಭೂಪಾಲ್, ಅ. 20 - ಪಾಕಿಸ್ತಾನದ ಪರ ಘೋಷಣೆ ಕೂಗಿದ ಆರೋಪಿಯೋರ್ವ, 21 ಬಾರಿ ಭಾರತ್ ಮಾತಾ ಕಿ ಜೈ ಎಂಬ ಘೋಷಣೆ ಹೇಳಬೇಕು ಎಂದು ಮಧ್ಯಪ್ರದೇಶದ ಹೈಕೋರ್ಟ್ ನಿರ್ದೇಶನ ನೀಡಿದೆ.

ಹೈಕೋರ್ಟ್ ನಿರ್ದೇಶನದಂತೆ ಆರೋಪಿ ಫೈಝಾನ್, ಪ್ರತಿ ತಿಂಗಳ ಮೊದಲ ಹಾಗೂ ನಾಲ್ಕನೇ ಮಂಗಳ ವಾರ ಇಲ್ಲಿನ ಮಿಸ್ರೋದ್ ಪೊಲೀಸ್ ಠಾಣೆಗೆ ಹಾಜರಾಗಿ ತ್ರಿವರ್ಣ ಧ್ವಜಕ್ಕೆ ವಂದಿಸಬೇಕಿದೆ ಹಾಗೂ ಭಾರತ್ ಮಾತಾ ಕಿ ಜೈ ಘೋಷಣೆ ಹೇಳಬೇಕಿದೆ.

ಹೈಕೋರ್ಟ್ ನಿರ್ದೇಶನದಂತೆ ಫೈಜನ್ ಮಂಗಳವಾರ ಪೊಲೀಸ್ ಠಾಣೆಗೆ ಹಾಜರಾಗಿ ಭಾರತ ಮಾತೆಗೆ ಜಯಘೋಷ ಹಾಕಿದ್ದಾನೆ ಹಾಗೂ ರಾಷ್ಟ್ರಧ್ವಜಕ್ಕೆ ವಂದಿಸಿದ್ದಾನೆ. ಈ ದೃಶ್ಯವನ್ನು ಪೊಲೀಸರು ವಿಡಿಯೋ ಚಿತ್ರೀಕರಣ ಮಾಡಿದ್ದಾರೆ.

ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಫೈಜಾನ್, ರೀಲ್ಸ್ ಮಾಡಿದ್ದು ಹಾಗೂ ಪಾಕಿಸ್ತಾನದ ಪರ ಘೋಷಣೆ ಕೂಗಿದ್ದು ದೊಡ್ಡ ತಪ್ಪಾಗಿದೆ. ಈ ಬಗ್ಗೆ ವಿಷಾದವಿದೆ ಎಂದಿದ್ದಾರೆ. ಫೈಜಾನ್ ರೀಲ್ಸ್‌ನಲ್ಲಿ ಪಾಕಿಸ್ತಾನದ ಪರ ಘೋಷಣೆ ಕೂಗಿದ್ದ. ಈ ವಿಷಯ ಬೆಳಕಿಗೆ ಬಂದ ನಂತರ ಪ್ರಕರಣ ದಾಖ ಲಿಸಲಾಗಿತ್ತು. ಆರೋಪಿಗೆ ಜಾಮೀನು ನೀಡುವಾಗ ಹೈಕೋರ್ಟ್, ಭಾರತದ ಪರ ಘೋಷಣೆ ಮಾಡಬೇಕು ಹಾಗೂ ತ್ರಿವರ್ಣ ಧ್ವಜಕ್ಕೆ ವಂದಿಸಬೇಕು ಎಂಬ ಷರತ್ತು ವಿಧಿಸಿತ್ತು.

# 3 ಸಿಆರ್‌ಪಿಎಫ್ ಶಾಲೆ, ಎರಡು ಕೇಂದ್ರೀಯ ವಿದ್ಯಾಲಯಗಳಿಗೆ ಹುಸಿ ಬಾಂಬ್ ಬೆದರಿಕೆ

ನವದೆಹಲಿ, ಅ. 22 - ದೆಹಲಿ ಮತ್ತು ಹೈದರಾಬಾದ್‌ನಲ್ಲಿರುವ 3 ಸಿ.ಆರ್.ಪಿ.ಎಫ್. ಶಾಲೆಗಳು ಹಾಗೂ ಎರಡು ಕೇಂದ್ರೀಯ ವಿದ್ಯಾಲಯಗಳ ಮೇಲೆ ಬಾಂಬ್ ದಾಳಿ ನಡೆಸುವುದಾಗಿ ಬೆದರಿಸುವ ಇ-ಮೇಲ್ ಬಂದಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ನಂತರ ಶಾಲೆಗಳನ್ನು ಸಮಗ್ರ ಪರಿಶೀಲನೆಗೆ ಒಳಪಡಿಸಲಾಯಿತು. ನಂತರದಲ್ಲಿ ಇದು ಹುಸಿ ಬೆದರಿಕೆ ಎಂಬುದು ಕಂಡು ಬಂದಿದೆ. ದೆಹಲಿಯ ಎರಡು ಹಾಗೂ ಹೈದರಾಬಾದ್‌ನ ಒಂದು ಸಿ.ಆರ್.ಪಿ.ಎಫ್. ಶಾಲೆಗಳು ಮತ್ತು ಹರಿಯಾಣ ಹಾಗೂ ಉತ್ತರ ಪ್ರದೇಶದ ತಲಾ ಒಂದು ಕೇಂದ್ರೀಯ ವಿದ್ಯಾಲಯಕ್ಕೆ ಬೆದರಿಕೆ ಹಾಕಲಾಗಿತ್ತು. ಪೊಲೀಸರು ಈ ಬಗ್ಗೆ ತನಿಖೆ ನಡೆಸುತ್ತಿದ್ದಾರೆ.

# ವಾಲ್ಮೀಕಿ ರೂಪಾಂತರ ಜೀವನ ನೊಂದವರಿಗೆ ಸ್ಫೂರ್ತಿಯ ಕಥೆ



ದಾವಿವಿಯಲ್ಲಿ ಜರುಗಿದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಮದಕರಿ ನಾಯಕ

ದಾವಣಗೆರೆ, ಅ.22- ವಾಲ್ಮೀಕಿ ಅವರ ರೂಪಾಂತರವಾದ ಜೀವನವು ದಲಿತರಿಗೆ, ನೊಂದವರಿಗೆ ಎಂದೂ ಸ್ಫೂರ್ತಿಯ ಕಥೆಯಾಗಿದೆ. ವಾಲ್ಮೀಕಿಯ ಜೀವನದ ಆದರ್ಶಗಳು ಇಂದಿಗೂ ಸತ್ಯ ಮತ್ತು ನಿರಂತರವಾಗಿದೆ ಎಂದು ದಾವಣಗೆರೆ ವಿಶ್ವವಿದ್ಯಾನಿಲಯ ಇಂಗ್ಲಿಷ್ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಹೆಚ್.ಆರ್ ಮದಕರಿ ನಾಯಕ ಹೇಳಿದರು.

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿ ಘಟಕದ ನೇತೃತ್ವದಲ್ಲಿ ಆಯೋಜಿಸಲಾಗಿದ್ದ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಯಾಗಿ ಅವರು ಮಾತನಾಡಿದರು.

ಮಹರ್ಷಿ ವಾಲ್ಮೀಕಿ ಭಾರತದ ಆದಿಕವಿ ಆಗಿದ್ದಾರೆ. ರಾಮಾಯಣ ಎಂದರೆ ವಾಲ್ಮೀಕಿ, ವಾಲ್ಮೀಕಿ ಎಂದರೆ ರಾಮಾಯಣ ಎನ್ನುವಷ್ಟು ಜನಪ್ರಿಯತೆಯನ್ನು ಅವರು ಗಳಿಸಿರುತ್ತಾರೆ. ಪ್ರತಿ ಅಕ್ಟೋಬರ್ ತಿಂಗಳಲ್ಲಿ ಇವರ ಜಯಂತಿಯನ್ನು ಆಚರಣೆ ಮಾಡಲಾಗುತ್ತದೆ ಎಂದು ಅವರು ತಿಳಿಸಿದರು.

ವಾಲ್ಮೀಕಿ ಭಾವಚಿತ್ರಕ್ಕೆ ಕುಲಸಚಿವ ಪ್ರೊ. ಮಹಾಬಲೇಶ್ವರ್ ಯು.ಎಸ್., ಹಣಕಾಸು ಅಧಿಕಾರಿ ದ್ಯಾಮನಗೌಡ ಮುದ್ದನಗೌಡ್ರ, ಸಂಚಾಲಕ ಡಾ. ನಿರಂಜನ್ ಎಂ.ಹೆಚ್., ವಿಶೇಷ ಅತಿಥಿ ಮದಕರಿ ನಾಯಕ ಮತ್ತು ಹಿರಿಯ ಪ್ರಾಧ್ಯಾಪಕ ಪ್ರೊ. ಲಕ್ಷ್ಮಣ್ ಪಿ ಹಾಗೂ ಸಿಂಡಿಕೇಟ್ ಸದಸ್ಯರು ಪುಷ್ಪಾರ್ಚನೆ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

# ರಷ್ಯಾ ಸಮರದಿಂದ ಉತ್ತರ – ದಕ್ಷಿಣ ಕೊರಿಯಾಗಳ ಚಕಮಕಿ

ಸಿಯೋಲ್, ಅ. 22 - ಉತ್ತರ ಕೊರಿಯಾ ತನ್ನ ಸೈನ್ಯವನ್ನು ರಷ್ಯಾಗಿ ರವಾನಿಸಿದರೆ, ಉಕ್ರೇನ್‌ಗೆ ಶಸ್ತ್ರಗಳನ್ನು ಪೂರೈಸುವುದಾಗಿ ದಕ್ಷಿಣ ಕೊರಿಯಾ ತಿಳಿಸಿದೆ. ರಷ್ಯಾಗೆ ಸೈನ್ಯ ರವಾನಿಸಿಲ್ಲ ಎಂದು ಉತ್ತರ ಕೊರಿಯಾ ಸ್ಪಷ್ಟಪಡಿಸಿದೆ.

**ಉತ್ತರ ಕೊರಿಯಾ ರಷ್ಯಾಗೆ ಸೈನ್ಯ ಕಳಿಸಿದರೆ, ಉಕ್ರೇನ್‌ಗೆ ಶಸ್ತ್ರ ರವಾನಿಸುವುದಾಗಿ ದಕ್ಷಿಣ ಕೊರಿಯಾ ಎಚ್ಚರಿಕೆ**

ಉತ್ತರ ಕೊರಿಯಾ ತನ್ನ ಸೈನ್ಯವನ್ನು ರಷ್ಯಾಗೆ ರವಾನಿಸಿದರೆ, ಇದಕ್ಕೆ ಪ್ರತಿಯಾಗಿ ರಷ್ಯಾ ಆಧುನಿಕ ಶಸ್ತ್ರಗಳನ್ನು ನೀಡಬಹುದು. ಇದರಿಂದಾಗಿ ಉತ್ತರ ಕೊರಿಯದ ಅಣು ಹಾಗೂ ಕ್ಷಿಪಣಿ ಯೋಜನೆಗೆ ನೆರವು ಸಿಗಲಿದೆ. ಈ ಕ್ಷಿಪಣಿಗಳನ್ನು ತನ್ನ ವಿರುದ್ಧ ಬಳಸಬಹುದು ಎಂದು ದಕ್ಷಿಣ ಕೊರಿಯಾ ಭಾವಿಸಿದೆ.

ಉತ್ತರ ಕೊರಿಯಾ ರಷ್ಯಾಗೆ ಸೈನ್ಯ ರವಾನಿಸಲು ಮುಂದಾಗಿರುವುದು ಖಂಡನಾರ್ಹ. ಉತ್ತರ ಕೊರಿಯಾ ಅಪರಾಧಿಕ ಗುಂಪಾಗಿದೆ. ತನ್ನ ಯುವಕರನ್ನು ಸಮರಕ್ಕಾಗಿ ಒತ್ತೆಯಾಳುಗಳಾಗಿ ರಷ್ಯಾಗೆ ಕಳಿಸುತ್ತಿದೆ ಎಂದು ದಕ್ಷಿಣ ಕೊರಿಯಾ ಹೇಳಿದೆ. ಕಳೆದ ಎರಡು ವರ್ಷಗಳಲ್ಲಿ ಉತ್ತರ ಕೊರಿಯಾ ಹಾಗೂ ರಷ್ಯಾ ಸಹಕಾರವನ್ನು ಹೆಚ್ಚಿಸಿಕೊಂಡಿವೆ. ಜೂನ್ ತಿಂಗಳಲ್ಲಿ ರಕ್ಷಣಾ ಸಹಭಾಗಿತ್ವ ಹೆಚ್ಚಿಸುವ ಒಪ್ಪಂದಕ್ಕೆ ಉಭಯ ದೇಶಗಳು ಸಹಿ ಹಾಕಿದ್ದವು.

# ಜಿಲ್ಲಾ ಕ್ರೀಡಾಂಗಣದಲ್ಲಿ ದಾವಿವಿ ಕಬಡ್ಡಿ ತಂಡಕ್ಕೆ ಆಯ್ಕೆ ಪ್ರಕ್ರಿಯೆ



ದಾವಣಗೆರೆ, ಅ.22- ದಾವಣಗೆರೆ ವಿಶ್ವವಿದ್ಯಾ ಲಯದ ಪುರುಷ ಮತ್ತು ಮಹಿಳಾ ಕಬಡ್ಡಿ ತಂಡದ ಆಯ್ಕೆ ಪ್ರಕ್ರಿಯೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಿತು.

ನಗರದ ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದ ಐಕ್ಯೂಎಸಿ ಘಟಕ, ಹಾಗೂ ದಾವಿವಿ ದೈಹಿಕ ಶಿಕ್ಷಣ ನಿರ್ದೇಶಕರ ಸಂಘ ವತಿಯಿಂದ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ 60 ಕ್ಕೂ ಹೆಚ್ಚು ಮಹಿಳಾ ಕ್ರೀಡಾಪಟುಗಳು ಮತ್ತು 80ಕ್ಕೂ ಹೆಚ್ಚು ಪುರುಷ ಕಬಡ್ಡಿ ಕ್ರೀಡಾಪಟುಗಳು ಭಾಗವಹಿಸಿದ್ದರು.


ಪ್ರಾಂಶುಪಾಲ ಎಂ. ಡಿ ಅಣ್ಣಯ್ಯ, ಐಕ್ಯೂಎಸಿ ಸಂಚಾಲಕ ಅಂಜಿನಪ್ಪ ಡಿ, ದೈಹಿಕ ಶಿಕ್ಷಣ ನಿರ್ದೇಶಕ ಬಸವರಾಜ ವಿ. ದಮ್ಮಳ್ಳಿ, ಆಯ್ಕೆ ಸಮಿತಿ ಸದಸ್ಯರಾದ ಚಂದ್ರೇಗೌಡ, ಗಿರೀಶ್, ಡಾ. ಚಂದ್ರಶೇಖರ್, ಡಾ. ವೀರಪ್ಪ ಮತ್ತು ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ. ವೀರೇಂದ್ರ, ಡಾ ಹರೀಶ್, ಸಜ್ಜನ್, ಡಾ. ರೇಖಾ, ಪದ್ಮ, ಡಾ. ಶಿವಶಂಕರ್ ವಿ., ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ರಾಜಕುಮಾರ್, ಗ್ರಂಥಪಾಲಕ ಮೊಹಮ್ಮದ್ ರಿಯಾಜ್ ಮೊದಲಾದವರು ಉಪಸ್ಥಿತರಿದ್ದರು.

# ನಗರದ ಯುಬಿಡಿಟಿ ಕಾಲೇಜಿನಲ್ಲಿ ಇಂದು

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಘಟಕ ಕಾಲೇಜು ಆದ ನಗರದ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ವಿಟಿಯು ಮತ್ತು ಇ ಅಂಡ್ ಐ ವಿಭಾಗದ ಸಹಯೋಗದಲ್ಲಿ ವಿಟಿಯು ಕನ್ಸೋರ್ಟಿಯಮ್ ಇ - ರಿಸೋರ್ಸ್ ತರಬೇತಿಯ ಉದ್ಘಾಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮುಖ್ಯ ಅತಿಥಿಗಳಾಗಿ ವಿಟಿಯು ಸ್ಕಿಲ್ ಡೆವೆಲಪ್ಮೆಂಟ್ ಸೆಂಟರ್‌ನ ನಿರ್ದೇಶಕರಾದ ಡಾ.ಸಂಧ್ಯಾ ಆರ್.ಅನ್ವೇಕರ್, ವಿಶೇಷ ಆಹ್ವಾನಿತರಾಗಿ ವಿಟಿಯುನ ಲೈಬ್ರರಿಯನ್, ಸಹ ಸಂಯೋಜಕ ಸೋಮರಾಯ್ ಬಿ. ತಳ್ಳೊಳ್ಳಿ ಭಾಗವಹಿಸಲಿದ್ದು, ಕಾಲೇಜಿನ ಪ್ರಾಂಶುಪಾಲ ಡಾ.ಡಿ.ಪಿ. ನಾಗರಾಜಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

# ನಗರದಲ್ಲಿ ಇಂದು ಕಿತ್ತೂರು ಚೆನ್ನಮ್ಮನವರ ಜಯಂತ್ಯೋತ್ಸವ



ಜಿಲ್ಲಾ ಲಿಂಗಾಯತ ಪಂಚಮಸಾಲಿ ಸಮಾಜದಿಂದ ರಾಷ್ಟ್ರಮಾತೆ ವೀರರಾಣಿ ಕಿತ್ತೂರು ಚೆನ್ನಮ್ಮನವರ 200ನೇ ವಿಜಯೋತ್ಸವ ಹಾಗೂ 246ನೇ ಜಯಂತ್ಯೋತ್ಸವದ ಪ್ರಯುಕ್ತ ಬೈಕ್ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ. ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಬೈಕ್ ರ್‍ಯಾಲಿಗೆ ಚಾಲನೆ ನೀಡಲಿದ್ದು, ಮಹಾನಗರ ಪಾಲಿಕೆ ಸದಸ್ಯ ಬಿ.ಜಿ. ಅಜಯ್‌ಕುಮಾರ್ ಕಾರ್ಯಕ್ರಮದ ನೇತೃತ್ವ ವಹಿಸಲಿದ್ದಾರೆ. ಬೆಳಿಗ್ಗೆ 9.30ಕ್ಕೆ ಎಸ್.ಎಸ್. ಹಾಸ್ಪಿಟಲ್ ಹಿಂಭಾಗ ಗಾಂಧಿ ಭವನದಿಂದ ಕುವೆಂಪು ಕನ್ನಡ ಭವನದವರೆಗೆ ಬೈಕ್ ರ್‍ಯಾಲಿ ಹಮ್ಮಿಕೊಳ್ಳಲಾಗಿದ್ದು, ಕುವೆಂಪು ಕನ್ನಡ ಭವನದಲ್ಲಿ ಬೆಳಿಗ್ಗೆ 11.30ಕ್ಕೆ ಕಾರ್ಯಕ್ರಮ ನಡೆಯಲಿದೆ.

# ಓರಿಯಂಟ್ ಸಿಮೆಂಟ್ ಖರೀದಿಸಿದ ಅದಾನಿ



ನವದೆಹಲಿ, ಅ. 22 – ಸಿ.ಕೆ. ಬಿರ್ಲಾ ಸಮೂಹದ ಓರಿಯಂಟ್ ಸಿಮೆಂಟ್ ಕಂಪನಿಯನ್ನು 8,100 ಕೋಟಿ ರೂ. ಗಳಿಗೆ ಖರೀದಿಸಲು ಒಪ್ಪಿಕೊಂಡಿರುವುದಾಗಿ ಅದಾನಿ ಸಮೂಹ ತಿಳಿಸಿದೆ. ಅದಾನಿ ಸಮೂಹವು ಈ ಹಿಂದೆ ಪೆನ್ನಾ ಸಿಮೆಂಟ್ ಹಾಗೂ ಸಾಂಘಿ ಇಂಡಸ್ಟ್ರೀಸ್ ಕಂಪನಿಗಳನ್ನು ಖರೀದಿಸಿತ್ತು. ಸಿಮೆಂಟ್ ವಲಯದಲ್ಲಿ ತನ್ನ ಸ್ಥಾನ ಭದ್ರಪಡಿಸಿಕೊಳ್ಳಲು ಅದಾನಿ ಸಮೂಹ ತೀವ್ರ ಪ್ರಯತ್ನ ನಡೆಸಿದೆ. 2028ರ ವೇಳೆಗೆ ವರ್ಷಕ್ಕೆ 140 ದಶಲಕ್ಷ ಟನ್ ಸಿಮೆಂಟ್ ಉತ್ಪಾದಿಸುವ ಸಾಮರ್ಥ್ಯದ ಗುರಿ ಹೊಂದಿದೆ.

# ನಗರದ ಈಶ್ವರಮ್ಮ ಶಾಲೆಯಲ್ಲಿ ಇಂದು

ಈಶ್ವರಮ್ಮ ಟ್ರಸ್ಟ್‌ನ ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ಸಹಯೋಗದಲ್ಲಿ ಇಸ್ರೋ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಮತ್ತು ಶ್ರೀ ಸತ್ಯ ಸಾಯಿ ವಿದ್ಯಾ ವಾಹಿನಿ, ಪುಟ್ಟಪರ್ತಿ ಇವರ ವತಿಯಿಂದ ಇಂದು ಬೆಳಿಗ್ಗೆ 9.30 ರಿಂದ ಸಂಜೆ 5 ಗಂಟೆ ವರೆಗೆ ಇಸ್ರೋ ಆನ್ ವ್ಹೀಲ್ಸ್ ಸ್ಪೇಸ್ ಎಕ್ಸಿಬಿಷನ್ ಕಾರ್ಯಕ್ರಮವನ್ನು ಈಶ್ವರಮ್ಮ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಪ್ರದರ್ಶನದ ಉದ್ಘಾಟನೆಯನ್ನು ಡಿಡಿಪಿಐ ಜಿ.ಕೊಟ್ರೇಶ್ ಮತ್ತು ಜಿ. ಪಂ. ಸಿಇಓ ಸುರೇಶ್ ಇಟ್ನಾಳ್ ನೆರವೇರಿಸಲಿದ್ದು, ಮುಖ್ಯ ಅತಿಥಿಗಳಾಗಿ ಇಸ್ರೋದ ಪಿವಿಎನ್ ಮೂರ್ತಿ, ಕಾರ್ಯದರ್ಶಿ ಕೆ.ಎಸ್.ಮಂಜುನಾಥ್ ಪಾಲ್ಗೊಳ್ಳಲಿದ್ದಾರೆ.

ಈಶ್ವರಮ್ಮ ಶಾಲಾ ಆಡಳಿತ ಮಂಡಳಿ ಅಧ್ಯಕ್ಷೆ ಸುಜಾತಾ ಕೃಷ್ಣ, ಟ್ರಸ್ಟ್ ಅಧ್ಯಕ್ಷೆ ಎ.ಆರ್.ಉಷಾ ರಂಗನಾಥ್, ಕಾರ್ಯದರ್ಶಿ ಜಿ.ಆರ್. ವಿಜಯಾನಂದ್, ಖಜಾಂಚಿ ಎ.ಪಿ.ಸುಜಾತಾ ಗೌರವ ಉಪಸ್ಥಿತರಿರುವರು.

# ರೆಡ್ ಕ್ರಾಸ್‌ನಿಂದ ಪ್ರಬಂಧ ಸ್ಪರ್ಧೆ

ದಾವಣಗೆರೆ, ಅ.22- ನಗರದ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯು ವಿಶ್ವ ಸಂಸ್ಥೆ ದಿನದ ಪ್ರಯುಕ್ತ 'ನಿಲ್ಲದ ಯುದ್ಧ ದಾಹ; ವಿಶ್ವಸಂಸ್ಥೆ ನೀತಿ ನಿಯಮ ಬದಲಾವಣೆ ಅನಿವಾರ್ಯವೇ?' ಎಂಬ ವಿಷಯದ ಕುರಿತು ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಿದೆ.

ಪ್ರಥಮ 3000 ರೂ. ದ್ವಿತೀಯ 2000 ರೂ. ಮತ್ತು ತೃತೀಯ 1000 ರೂಪಾಯಿ ಬಹುಮಾನ ನೀಡಲಾಗುವುದು ಎಂದು ರೆಡ್ ಕ್ರಾಸ್ ಸಂಸ್ಥೆ ಸಭಾಪತಿ ಡಾ. ಎ. ಎಂ.ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ಆನಂದ್ ಜ್ಯೋತಿ ತಿಳಿಸಿದ್ದಾರೆ.

1000 ಪದಗಳು ಮೀರದಂತೆ, ಕನ್ನಡದಲ್ಲಿ ಸ್ವಂತ ಕೈ ಬರಹದಲ್ಲಿ ಪ್ರಬಂಧ ಬರೆದು 4.11.2024ರ ಒಳಗಾಗಿ ಅಂಚೆ ಮೂಲಕವಾಗಲೀ ಅಥವಾ ಖುದ್ದಾಗಿಯಾಗಲಿ ತಲುಪಿಸಬೇಕು. ವಿಳಾಸ: ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಶ್ರೀ ಶಾಮನೂರು ಶಿವಶಂಕರಪ್ಪ ರೆಡ್ ಕ್ರಾಸ್ ಭವನ, ನಂ. 302, 'ಎ' ಬ್ಲಾಕ್, ದೇವರಾಜ ಅರಸು ಬಡಾವಣೆ, ದಾವಣಗೆರೆ. ದೂರವಾಣಿ: 08192-252550.


# ಸೌಜನ್ಯ ಅವರಿಗೆ ಪಿಹೆಚ್‌ಡಿ ಪದವಿ



ದಾವಣಗೆರೆ, ಅ. 22- ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅತಿಥಿ ಉಪನ್ಯಾಸಕರಾದ ಶ್ರೀಮತಿ ಸೌಜನ್ಯ ಎನ್. ಅವರಿಗೆ ದಾವಣಗೆರೆ ವಿಶ್ವವಿದ್ಯಾಲಯವು ಪಿಹೆಚ್‌ಡಿ ಪದವಿ ನೀಡಿದೆ.

ದಾವಣಗೆರೆ ವಿಶ್ವವಿದ್ಯಾಲಯದ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ. ಜೆ.ಕೆ. ರಾಜು ಅವರ ಮಾರ್ಗದರ್ಶನದಲ್ಲಿ ಸೌಜನ್ಯ ಅವರು ಮಂಡಿಸಿದ್ದ 'ಬಿಹೇವಿರಿಯಲ್ ಕಾಂಪಿಟೆನ್ಸಿ ಮ್ಯಾಪಿಂಗ್ - ಎ ಸ್ಟಡಿ ವಿತ್ ರೆಫರೆನ್ಸ್ ಟು ಗೌರ್ನಮೆಂಟ್ ಫಸ್ಟ್ ಗ್ರೇಡ್ ಕಾಲೇಜ್ ಟೀಚರ್ಸ್ ಅಫಿಲೇಟೆಡ್ ಟು ದಾವಣಗೆರೆ ಯೂನಿವರ್ಸಿಟಿ' ಎಂಬ ಮಹಾಪ್ರಬಂಧಕ್ಕೆ ಈ ಪದವಿ ನೀಡಲಾಗಿದೆ.

# ನಗರದಲ್ಲಿ ಇಂದು ಸಿದ್ಧ ಕಣ್ಣಿನ ಹನಿ



ವಿದ್ಯಾನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇಂದು ಬೆಳಿಗ್ಗೆ 10 ರಿಂದ 12 ರವರೆಗೆ ಹಾಗೂ ಹರಿಹರ ಸಮೀಪದ ಕೋಡಿ ಯಾಲ-ಹೊಸ ಪೇಟೆಯ ಪುಣ್ಯಕೋಟಿ ಮಠದಲ್ಲಿ ಮಧ್ಯಾಹ್ನ 3 ರಿಂದ ಸಂಜೆ 5 ರವರೆಗೆ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ.

ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸ ಬಹುದು. ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ, ಬಿ.ಎಸ್. ವೀರೇಶ್ (88676 - 91155), ಎನ್.ಎಂ. ತಿಪ್ಪೇಸ್ವಾಮಿ (98868-74078), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42713), ಎಂ.ಆರ್.ಅಶೋಕ್ ಕುಮಾರ್ (95917 76643) ಅವರನ್ನು ಸಂಪರ್ಕಿಸಬಹುದು.

## PUBLIC NOTICE


General Public is hereby informed that **(1) Smt. Lakshmi Raghu W/o Late C.R. Raghu, (2) Kumari C.R. Kruthika, D/o Late C.R. Raghu, and (3) Smt. Anupama C.R. D/o Late C. Rangaswamy** being joint owners have agreed to sell to my brother Sri Tarikere Gururaja (aka Gururaja T.L.), free from all sorts of encumbrances and charges, their residential house property bearing Door No. 3991/1-2-3- 4 built on land measuring total area of 144.3713 square meters having an old two floor RCC building measuring total area of 204.2918 square meters located at 7th Cross, 16th Main Road, MCC B Block, Near Old RTO Office, Davangere 577004.

This property bounded on the NORTH: By neighbour Sri. Vinayaka Joshi house, on the SOUTH: By neighbour Sri. Haleshappa house; on the EAST: By Road; on the WEST: By rear end neighbour house. This property has been registered at the office of the Sub Registrar, Davangere bearing property no. 33-4-541-3991/1-2-3-4 comes under ward no. 33 (new ward no. 42) with e-Khatha document no. 23943574. The Original Sale Deed of the land (Site No. 32) belonging to this property shows Registered as no. 328 of the year 1968-1969 at page 158/160, volume of 1052, book no. 1. Any publics, person(s), previous owners, previous/current tenants, financial institutions, corporate bodies etc., having any right, title or interest of whatsoever nature in and over the above referred property shall contact the undersigned in writing with all the documents(s) in support of his/her/their claim within 10 days from the date hereof failing the said sale transaction will be completed and the objection(s) if any received thereafter will be deemed to have been waived to an intents and purposes.

Sd/- **Sri Bharath Kumar T L**
# 1719/B, 10th Cross, Siddaveerappa Badavane, Davangere -4. Ph.9916188947

**Date: October 18, 2024**

## ಧನ್ವಂತರಿ ಜಯಂತಿ ಮತ್ತು ರಾಷ್ಟ್ರೀಯ ಆಯುರ್ವೇದ ದಿನದ ಪ್ರಯುಕ್ತ



ಶರತ್ ಋತುವಿನ ಈ ತಿಂಗಳಿನಲ್ಲಿ ಮನುಷ್ಯನು ಪಿತ್ತ-ರಕ್ತ ಕಾಯಿಲೆಗೆ ಗುರಿಯಾಗುತ್ತಾನೆಂದು, ಈ ಕಾಲದಲ್ಲಿ ರಕ್ತ ಶುದ್ಧಿಯಾಗುವ ಕ್ರಿಯೆಗಳು ಮಾಡಿಸಿದ್ದಲ್ಲಿ ದೇಹವು ಆರೋಗ್ಯದಿಂದ ಮತ್ತು ಚರ್ಮವು ಕಾಂತಿಯುಕ್ತವಾಗುತ್ತೆಂದು ವಿಶ್ಲೇಷಿಸಲಾಗಿದೆ. ಈ ನಿಟ್ಟಿನಲ್ಲಿ ನಮ್ಮ ಆಸ್ಪತ್ರೆಯಲ್ಲಿ ಕೆಳಕಂಡ ಶಿಬಿರವನ್ನು ಆಯೋಜಿಸಲಾಗಿದೆ.

**ಚರ್ಮವ್ಯಾಧಿಗಳಿಗೆ ಉಚಿತ ಚಿಕಿತ್ಸಾ ಶಿಬಿರ**
ದಿನಾಂಕ 24 ಮತ್ತು 25ನೇ ಅಕ್ಟೋಬರ್, 2024, ಸಮಯ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 4 ಗಂಟೆವರೆಗೆ. ಸ್ಥಳ: ಅನ್ವಯ ಆಯುರ್ವೇದ ಚಿಕಿತ್ಸಾಲಯ, ತರಳಬಾಳು ಬಡಾವಣೆ.

**ಅಜೀರ್ಣ, ಹೊಟ್ಟೆಯ ತೊಂದರೆಗಳಿಗೆ ಉಚಿತ ಚಿಕಿತ್ಸಾ ಶಿಬಿರ**
ದಿನಾಂಕ 26ನೇ ಅಕ್ಟೋಬರ್, 2024, ಸಮಯ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 4 ಗಂಟೆವರೆಗೆ. ಸ್ಥಳ: ಅನ್ವಯ ಆಯುರ್ವೇದ ಆಸ್ಪತ್ರೆ, ಎಂ.ಸಿ.ಸಿ. 'ಎ' ಬ್ಲಾಕ್

**ಮುಟ್ಟಿನ ತೊಂದರೆಗಳಿಗೆ ಉಚಿತ ಚಿಕಿತ್ಸಾ ಶಿಬಿರ**
ದಿನಾಂಕ 27ನೇ ಅಕ್ಟೋಬರ್, 2024, ಸಮಯ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 4 ಗಂಟೆವರೆಗೆ. ಸ್ಥಳ: ಅನ್ವಯ ಆಯುರ್ವೇದ ಆಸ್ಪತ್ರೆ, ಎಂ.ಸಿ.ಸಿ. 'ಎ' ಬ್ಲಾಕ್

**ಸ್ವಯಂ ಪ್ರೇರಿತ ರಕ್ತದಾನ ಶಿಬಿರ**
ದಿನಾಂಕ 28ನೇ ಅಕ್ಟೋಬರ್, 2024, ಸಮಯ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ.

**ಲೋಕ ಕಲ್ಯಾಣಾರ್ಥವಾಗಿ ಧನ್ವಂತರಿ ಹೋಮ**
ದಿನಾಂಕ 29ನೇ ಅಕ್ಟೋಬರ್, 2024, ಮಂಗಳವಾರದಂದು

**ಅನ್ವಯ ಆಯುರ್ವೇದ ಆಸ್ಪತ್ರೆ**
# 1981, 10ನೇ ಕ್ರಾಸ್, ಎಂ.ಸಿ.ಸಿ.'ಎ' ಬ್ಲಾಕ್, ಆಶ್ರಯ ಆಸ್ಪತ್ರೆ ಹಿಂಭಾಗ, ದಾವಣಗೆರೆ
ಮೊ: 86186 42929, 63643 21664, ಫೋ. : 08192 252228
ವಿ.ಸೂ.: ವೈದ್ಯರು ಏನಾದರೂ ಚಿಕಿತ್ಸೆ ಸೂಚಿಸಿದರೆ ಶೇ.30 ರಷ್ಟು ರಿಯಾಯಿತಿ ನೀಡಲಾಗುತ್ತದೆ.

## ಶಿವ ಸಹಕಾರಿ ಬ್ಯಾಂಕ್ ನಿಯಮಿತ

ಆಡಳಿತ ಕಚೇರಿ, ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ-1.
ಫೋನ್ : 08192 256107

**ಬ್ಯಾಂಕಿನ ಸದಸ್ಯರ ಗಮನಕ್ಕೆ**

ಈ ಮೂಲಕ ಗುರುತಿನ ಚೀಟಿ ಪಡೆಯದೇ ಇರುವ ಸದಸ್ಯರುಗಳಿಗೆ ತಿಳಿಯಪಡಿಸುವುದೇನೆಂದರೆ ಡಿಸೆಂಬರ್ 2024ರ ತಿಂಗಳಲ್ಲಿ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ ನಡೆಯಲಿದ್ದು, ಬ್ಯಾಂಕಿನಿಂದ ನೀಡಲ್ಪಟ್ಟ ಭಾವಚಿತ್ರಗಳನ್ನೊಳಗೊಂಡ ಗುರುತಿನ ಚೀಟಿಯನ್ನು ಮತದಾನದ ವೇಳೆಯಲ್ಲಿ ಹಾಜರುಪಡಿಸುವುದು ಕಡ್ಡಾಯವಾಗಿರುತ್ತದೆ. ಆದ್ದರಿಂದ ಮತದಾನ ಮಾಡಲು ಅನುಕೂಲವಾಗುವಂತೆ ಗುರುತಿನ ಚೀಟಿ ಪಡೆಯದೇ ಇರುವ ಬ್ಯಾಂಕಿನ ಸದಸ್ಯರು ತಮ್ಮ ವಿಳಾಸ ದೃಢೀಕರಣದೊಂದಿಗೆ ಇತ್ತೀಚಿನ 3 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳನ್ನು ಪ್ರಧಾನ ಕಛೇರಿಯಲ್ಲಿ ಸಲ್ಲಿಸಿ, ದಿನಾಂಕ 30.11.2024ರ ಒಳಗಾಗಿ ಗುರುತಿನ ಚೀಟಿ ಪಡೆಯಲು ಕೋರಲಾಗಿದೆ.

ದಾವಣಗೆರೆ
ದಿನಾಂಕ : 22.10.2024

ಸಹಿ/- ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಪ್ರಭಾರಿ ಪ್ರಧಾನ ವ್ಯವಸ್ಥಾಪಕರು
ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ.

## IN THE COURT OF THE HON'BLE PRINCIPAL SENIOR CIVIL JUDGE & JMFC, AT DAVANGERE

**CRL.MISC.NO.: 360/2024**

**BETWEEN:** SMT. SHARADAMMA, W/O LATE KRISHNAPP .B, AGED ABOUT 67 YEARS, RESIDING AT; #112/1, HONDADA CIRCLE, TALWAR KERE, DAVANGERE - 01............ PETITIONER

**AND:** THE REGISTRAR, BIRTHS AND DEATHS REGISTRAR OFFICER, MAHANAGAR PALIKE OFFICE, DAVANGERE ............RESPONDENT

**PAPER PUBLICATION**

The Petitioner has filed this petition praying for grant of Death Certificate of her father younger by namely late Basappa, S/o Late Doddarangappa who was dies on 01-02-1960 at; Kittur Village, Anagodu Hobli, Davangere Taluk & District for issuance of the Death Certificate if any of the objections from otherside or public at large pleased to file their objections either through counsel or personally on or before 2.12.2024 at 11 am hours before the court hall or otherwise taken procedure for necessary disposal of the above case.

Issued under my seal and signature on 19.10.2024.

**S. Shivakumar,**
Advocate,
Davanagere-06.
**M.No. : 99649 27643**

By order of the Court
**Chief Ministerial Officer**
PRL. Senior Civil Judge &
JMFC Court Davanagere.

## ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ.
## (ಜಿಲ್ಲಾ ನಗರಾಭಿವೃದ್ಧಿ ಕೋಶ)

ದೂರವಾಣಿ ಸಂಖ್ಯೆ:08192–251168 e-mail:dudc_dvg@yahoo.co.in

ಸಂ:ಜಿ.ನ.ಕೋ.ದಾ(2)/ಸಿಆರ್/1142/2021–22
ದಿನಾಂಕ:19–10–2024

**ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**

ದಾವಣಗೆರೆ ಜಿಲ್ಲೆಯ ಮಾನ್ಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ–4) ಯೋಜನೆಯ ಅನುದಾನದಡಿ ಪೌರಾಡಳಿತ ನಿರ್ದೇಶನಾಲಯದಿಂದ ಅನುಮೋದನೆ ಪಡೆದುಕೊಂಡಿರುವ ಕ್ರಿಯಾ ಯೋಜನೆಯಂತೆ ಚನ್ನಗಿರಿ ಪುರಸಭೆ ವ್ಯಾಪ್ತಿಯ ಒಳಾಂಗಣ ಕ್ರೀಡಾಂಗಣದಲ್ಲಿ ವ್ಯಾಯಾಮ ಸಾಮಾಗ್ರಿಗಳನ್ನು ಅಳವಡಿಸುವುದು ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ಈ ಕೆಳಗಿನ ಇಂಡೆಂಟ್ ನಂಬರ್‌ನಂತೆ ಐಟಂವಾರು ಟೆಂಡರ್‌ನ್ನು ದ್ವಿ ಲಕೋಟೆ ಪದ್ಧತಿ (Two Covers System) ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

(1) ಇಂಡೆಂಟ್‌ಗಳು:– ಚನ್ನಗಿರಿ ಪುರಸಭೆ ವ್ಯಾಪ್ತಿಯ ಒಳಾಂಗಣ ಕ್ರೀಡಾಂಗಣದಲ್ಲಿ ವ್ಯಾಯಾಮ ಸಾಮಾಗ್ರಿಗಳನ್ನು ಅಳವಡಿಸುವುದು ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ. ಇಂಡೆಂಟ್ ನಂಬರ್: DMA/ 2024-25/IND3249/ Call-3 (2) ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ ಜಿ.ಎಸ್.ಟಿ ಮೊತ್ತ ಹೊರತುಪಡಿಸಿ):– 42.28 (3) ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):– 84,561.00 (4) ಇ–ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿ:– 06–11–2024 (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:– 08–11–2024 (6) ಆರ್ಥಿಕ ಬಿಡ್ ತೆರೆಯುವ ದಿನಾಂಕ:– 11–11–2024 ಗುತ್ತಿಗೆ ಅವಧಿ:– 01 ತಿಂಗಳು ಸದರಿ ಕಾಮಗಾರಿಗಳ ವಿವರ, ಹಾಗೂ ಇತರೆ ಷರತ್ತುಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ http://kppp.karnataka.gov.in ಮೂಲಕ ಹಾಗೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ತಾಂತ್ರಿಕ ಶಾಖೆಯಿಂದ ಪಡೆದುಕೊಳ್ಳಬಹುದಾಗಿದೆ. ವೇಳಾಪಟ್ಟಿಯಲ್ಲಾಗುವ ಯಾವುದೇ ಬದಲಾವಣೆಯನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಸೂಚಿಸಲಾಗುವುದು. ದಿನ ಪತ್ರಿಕೆ ಅಥವಾ ಯಾವುದೇ ಜಾಹೀರಾತು ಪ್ರಕಟಣೆ ನೀಡಲಾಗುವುದಿಲ್ಲ.

ವಾಸಾಇ/ದಾವಣಗೆರೆ/423/ಕೆಎಸ್‌ಎಂಸಿಎ/2024–25

ಸಹಿ/–ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ದಾವಣಗೆರೆ.

## ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ

ಟಿಪ್ಪು ಸುಲ್ತಾನ್ ಅರಮನೆ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018. ಫೋ. : 080 26702024
ಸಂಖ್ಯೆ : ಸಾ.ಆ.ವಿ./ಕ.-724/213/2024-25 ದಿನಾಂಕ : 21.10.2024

**ಟೆಂಡರ್ ಪ್ರಕಟಣೆ**

ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಕೇಂದ್ರ ಕಛೇರಿ ಬೆಂಗಳೂರು, ಇದರ ದಾವಣಗೆರೆ ನಗರದಲ್ಲಿರುವ ನಿವೇಶನ 1046.25 ಚದರ ಮೀಟರ್ ವಿಸ್ತೀರ್ಣ ಇರುತ್ತದೆ. ಈ ನಿವೇಶನಕ್ಕೆ 432 ಅಡಿ ಉದ್ದ ಹಾಗೂ 6 ಅಡಿ ಎತ್ತರದ Precast Compound wallನ್ನು ಒಟ್ಟು - 2592 ಚದುರ ಅಡಿಯಷ್ಟು ನಿರ್ಮಿಸಲು, ಜೊತೆಗೆ M.S. Flat or M.S. sq.rodಗಳಿಂದಾದ 15 ಅಡಿ ಅಗಲದ ಗೇಟ್ ಅಳವಡಿಸಲು ಅಂದಾಜು ರೂ. 4,80,000/-ಗಳ ವೆಚ್ಚದಲ್ಲಿ ದರಪಟ್ಟಿಗಳನ್ನು ಆಹ್ವಾನಿಸಲಾಗಿರುತ್ತದೆ. ವಿವರ ಈ ಕೆಳಗಿನಂತಿರುತ್ತದೆ.

1) ಟೆಂಡರ್ ಪ್ರಕಟಣೆ ದಿನಾಂಕ : 23.10.2024
2) ಟೆಂಡರ್ ಸಲ್ಲಿಸಲು ಕೊನೆಯ ದಿ.:30.10.2024 ಸಂಜೆ 4 ಗಂಟೆಗೆ
3) ಟೆಂಡರ್ ತೆರೆಯುವ ದಿನಾಂಕ : 05.11.2024 ಸಂಜೆ 4.00 ಗಂಟೆಗೆ

ದರಪಟ್ಟಿಗಳನ್ನು ಮುಚ್ಚಿದ ಲಕೋಟೆಯಲ್ಲಿ, ಈ ಕೆಳಕಂಡ ವಿಳಾಸಕ್ಕೆ ಕಳುಹಿಸಲು ಕೋರಿದೆ.

ವಿಳಾಸ : ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ.,
ಶಾಖಾ ಕಛೇರಿ-ದಾವಣಗೆರೆ, ಅ/ಔ ಶಾಖಾಂಬರಿ ನಿಲಯ, ಡೋರ್ ನಂ. 318, ಪೆವಿಲಿಯನ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-577 004.

ಸಹಿ/- ವ್ಯವಸ್ಥಾಪಕರ ನಿರ್ದೇಶಕರು



## ಮೈದುಂಬಿಕೊಂಡ ಪುಷ್ಕರಣಿ ...

ಸಂತೇಬೆನ್ನೂರು, ಅ.22- ಇತ್ತೀಚೆಗೆ ಸುರಿದ ಮಳೆಯಿಂದಾಗಿ ಇಲ್ಲಿನ ಐತಿಹಾಸಿಕ ಪುಷ್ಕರಣಿ ಮೈದುಂಬಿಕೊಂಡಿದ್ದು, ನೋಡಲು ಬಂದ ಪ್ರೇಕ್ಷಕರನ್ನು ರೋಮಾಂಚನಗೊಳಿಸುತ್ತಿದೆ. ಇಂತಹ ಪ್ರೇಕ್ಷಣೀಯ ಸ್ಥಳಗಳನ್ನು ಪುರಾತತ್ವ ಮತ್ತು ಪ್ರವಾಸೋದ್ಯಮ ಇಲಾಖೆ ಹೆಚ್ಚು ಪ್ರವಾಸಿಗಳನ್ನು ಆಕರ್ಷಿಸುವಂತೆ ಮಾಡಬೇಕಿದೆ ಎಂದು ಕೆ. ಸಿರಾಜ್ ಅಹಮ್ಮದ್ ಒತ್ತಾಯಿಸಿದ್ದಾರೆ.

# ಜಿಲ್ಲಾಡಳಿತದಿಂದ ಅದ್ಧೂರಿ ರಾಜ್ಯೋತ್ಸವ

## ಅಚ್ಚುಕಟ್ಟಾಗಿ ಸಿದ್ಧತೆ ಮಾಡಿಕೊಳ್ಳಲು ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ ಸೂಚನೆ



ದಾವಣಗೆರೆ, ಅ.22- ನ. 1ರಂದು ಜಿಲ್ಲಾಡಳಿತದಿಂದ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ 69 ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಧ್ವಜಾರೋಹಣ ನೆರವೇರಿಸುವರು ಎಂದು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ತಿಳಿಸಿದರು.

ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ರಾಜ್ಯೋತ್ಸವ ಆಚರಣೆ ಪೂರ್ವಭಾವಿ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕರ್ನಾಟಕ ರಾಜ್ಯೋತ್ಸವವನ್ನು ಅದ್ಧೂರಿಯಾಗಿ ಆಚರಣೆ ಮಾಡಲಾಗುತ್ತಿದ್ದು, ಹೈಸ್ಕೂಲ್ ಮೈದಾನದಿಂದ ವಿವಿಧ ಕಲಾ ತಂಡಗಳೊಂದಿಗೆ ಭುವನೇಶ್ವರಿ ದೇವಿ ಭಾವಚಿತ್ರದ ಮೆರವಣಿಗೆ ನಡೆಯಲಿದೆ.

ರಾಜ್ಯೋತ್ಸವ ಅಂದರೆ ನವೆಂಬರ್ ತಿಂಗಳಿಗೆ ಮಾತ್ರ ಕನ್ನಡ ಬಳಕೆ ಸೀಮಿತವಾಗದೇ ಆಡಳಿತದಲ್ಲಿ ಕನ್ನಡ, ನಿತ್ಯ ಬಳಕೆಯಲ್ಲಿ ಕನ್ನಡ, ಕಡತದಲ್ಲಿ ಕನ್ನಡ ಬಳಕೆ ಮಾಡುವ ಮೂಲಕ ವರ್ಷಪೂರ್ತಿ ರಾಜ್ಯೋ ತ್ಸವ ಆಚರಣೆ ಮಾಡಲಾಗುತ್ತಿದೆ. ಎಲ್ಲಾ ಇಲಾಖೆಯಲ್ಲಿಯೂ ಕನ್ನಡ ಬಳಕೆ ಕಡ್ಡಾಯ ಮಾಡಲಾಗಿದೆ. ಕೆಲವು ಖಾಸಗಿ ಹೆದ್ದಾರಿ ಫಲಕಗಳಲ್ಲಿ ಇಂಗ್ಲಿಷ್ ಬಳಕೆ ಮಾಡಲಾಗುತ್ತಿದೆ ಮತ್ತು ಶಾಲೆಗಳಲ್ಲಿ ಮಕ್ಕಳು ಇಂಗ್ಲೀಷ್‌ನಲ್ಲಿಯೇ ಮಾತನಾಡಬೇಕೆಂದು ಕಡ್ಡಾಯಗೊಳಿಸಿರುವ ಬಗ್ಗೆ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರ ಮೂಲಕ ಅಂತಹ ಶಾಲೆಗಳಿಗೆ ನೋಟಿಸ್ ನೀಡಲಾಗುತ್ತದೆ ಎಂದರು.

ಜಿಲ್ಲಾ ಕ್ರೀಡಾಂಗಣದಲ್ಲಿ ನಡೆ ಯುವ ಸಾಂಸ್ಕೃತಿಕ ಕಾರ್ಯಕ್ರಮ ದಲ್ಲಿ ನಾಡು, ನುಡಿಯ ಕುರಿತಂತೆ ಗುಣಮಟ್ಟದ ನೃತ್ಯ ಕಾರ್ಯಕ್ರಮ ಏರ್ಪಾಡು ಮಾಡಲಾಗುತ್ತದೆ. ಸಂಜೆಯ ಸಾಂಸ್ಕೃತಿಕ ಕಾರ್ಯ ಕ್ರಮಗಳನ್ನು ಗ್ಲಾಸ್‌ಹೌಸ್‌ನಲ್ಲಿ ಏರ್ಪಡಿಸಲಾಗುತ್ತದೆ. ಈ ಕಾರ್ಯಕ್ರಮಗಳನ್ನು ತುಂಬಾ ಅಚ್ಚುಕಟ್ಟಾಗಿ ಏರ್ಪಡಿಸಲು ಸೂಚನೆ ನೀಡಿದರು.

ರಾಜ್ಯೋತ್ಸವ ಆಚರಣೆಗೆ ಅಗತ್ಯವಿರುವ ಸಿದ್ಧತೆ ಕೈಗೊಳ್ಳಲು ವಿವಿಧ ಉಪಸಮಿತಿಗಳನ್ನು ರಚಿಸಲಾಗಿದ್ದು, ಆಯಾ ಇಲಾಖೆ ಅಧಿಕಾರಿಗಳು ಸಿದ್ದತೆ ಕೈಗೊಳ್ಳಲು ಸೂಚನೆ ನೀಡಿ, ಎಲ್ಲಾ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕಡ್ಡಾಯವಾಗಿ ಕಾರ್ಯಕ್ರಮ ದಲ್ಲಿರಬೇಕೆಂದು ಸೂಚಿಸಿದರು.

ಈ ವೇಳೆ ವಿವಿಧ ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಿ ತಮ್ಮ ಸಲಹೆಗಳನ್ನು ನೀಡಿದರು.

ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಕೃಷ್ಣನಾಯ್ಕ್, ಪಾಲಿಕೆ ಆಯುಕ್ತರಾದ ರೇಣುಕಾ, ಕ.ಸಾ.ಪ ಅಧ್ಯಕ್ಷ ಬಿ.ವಾಮದೇವಪ್ಪ, ಕನ್ನಡ ಅಭಿವೃದ್ದಿ ಪ್ರಾಧಿಕಾರದ ಸದಸ್ಯ ಡಾ. ರಾಮಚಂದ್ರಪ್ಪ ಹಾಗೂ ಇತರರು ಇದ್ದರು.

# ವಕ್ಫ್ ಸಮಿತಿ ಸಭೆಯಲ್ಲಿ ಬಾಟಲಿ ಎಸೆದ ಸಂಸದ : ಅಮಾನತ್ತು

ನವದೆಹಲಿ, ಅ. 22 - ವಕ್ಫ್ ಮಸೂದೆ ಕುರಿತ ಸಂಸದೀಯ ಸಮಿತಿ ಸಭೆ ನಡೆಯುವಾಗ ತೃಣಮೂಲ ಕಾಂಗ್ರೆಸ್ ಸಂಸದ ಕಲ್ಯಾಣ್ ಬ್ಯಾನರ್ಜಿ ಅವರು ನೀರಿನ ಬಾಟಲಿಯನ್ನು ಒಡೆದು, ಸಮಿತಿ ಅಧ್ಯಕ್ಷರ ಕಡೆ ಎಸೆದಿದ್ದಾರೆ. ನಂತರ ಬ್ಯಾನರ್ಜಿ ಅವರನ್ನು ಒಂದು ದಿನದ ಅವಧಿಗೆ ಅಮಾನತ್ತುಗೊಳಿಸಲಾಗಿದೆ.

ಮಸೂದೆಗೆ ಸಂಬಂಧಿಸಿದಂತೆ ಬಿಜೆಪಿ ಸಂಸದ ಅಭಿಜಿತ್ ಗಂಗೋಪಾಧ್ಯಾಯ ಹಾಗೂ ಸಂಸದ ಬ್ಯಾನರ್ಜಿ ನಡುವೆ ಚಕಮಕಿ ನಡೆದಿತ್ತು. ಆಗ ಬ್ಯಾನರ್ಜಿ ಬಾಟಲಿಯನ್ನು ಸಮಿತಿಯ ಅಧ್ಯಕ್ಷ ಜಗದಂಬಿಕ ಪಾಲ್ ಕಡೆ ಎಸೆದಿದ್ದಾರೆ.

ಬ್ಯಾನರ್ಜಿ ಬಾಟಲಿ ಒಡೆಯುವಾಗ ಅವರ ಬೆರಳುಗಳಿಗೆ ಗಾಯಗಳಾಗಿವೆ. ನಂತರ ಅವರಿಗೆ ಪ್ರಾಥಮಿಕ ಚಿಕಿತ್ಸೆ ನೀಡಲಾಗಿದೆ.

ಒಡಿಶಾದ ಎರಡು ಸಂಘಟನೆಗಳು ಸಮಿತಿಯ ಎದುರು ತಮ್ಮ ನಿಲುವು ತಿಳಿಸುತ್ತಿದ್ದವು. ಈ ಸಂಘಟನೆಯಲ್ಲಿ ನಿವೃತ್ತ ನ್ಯಾಯಾಧೀಶರು ಹಾಗೂ ವಕೀಲರೂ ಇದ್ದರು. ಈ ಸಂಘಟನೆಗಳು ಮಸೂದೆಯ ಬಗ್ಗೆ ಯಾವ ಸಂಬಂಧ ಹೊಂದಿವೆ ಎಂದು ಪ್ರತಿಪಕ್ಷಗಳು ಪ್ರಶ್ನಿಸಿದ್ದವು.

ಈ ಸಂದರ್ಭದಲ್ಲಿ ಬ್ಯಾನರ್ಜಿ ಅವರು ಮಧ್ಯಪ್ರವೇಶಿಸಿ ಮಾತನಾಡಲು ಸಮಿತಿಯ ಅಧ್ಯಕ್ಷರು ಅನುಮತಿ ನೀಡಿದ್ದರು. ಎರಡನೇ ಬಾರಿ ಮಧ್ಯ ಪ್ರವೇಶಿಸಲು ಬಯಸಿದಾಗ ಅನುಮತಿ ನಿರಾಕರಿಸಿದರು. ಆಗ ಬ್ಯಾನರ್ಜಿ ಮತ್ತು ಗಂಗೋಪಾಧ್ಯಾಯ ನಡುವೆ ಚಕಮಕಿ ನಡೆಯಿತು ಎಂದು ಮೂಲಗಳು ತಿಳಿಸಿವೆ.

# ಪ್ರಿಯಾಂಕ ನಾಮಪತ್ರ ಸಲ್ಲಿಕೆಗೆ ರಾಜ್ಯದ ಪ್ರಮುಖ ನಾಯಕರು

ಬೆಂಗಳೂರು, ಅ. 22 - ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಕೇರಳದ ವಯನಾಡು ಲೋಕಸಭಾ ಕ್ಷೇತ್ರದ ಉಪಚುನಾವಣಾ ಕಣದಿಂದ ಆಯ್ಕೆ ಬಯಸಿ ನಾಳೆ ನಾಮಪತ್ರ ಸಲ್ಲಿಸುತ್ತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ರಾಜ್ಯದ ಪ್ರಮುಖ ನಾಯಕರು ಉಪಸ್ಥಿತರಿರಲಿದ್ದಾರೆ.

ನಾಮಪತ್ರ ಸಲ್ಲಿಕೆ ಹಾಗೂ ಅದಕ್ಕೂ ಮುನ್ನ ನಡೆಯುವ ರೋಡ್ ಶೋನಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ಅವರಷ್ಟೇ ಅಲ್ಲದೆ, ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಯನಾಡಿಗೆ ತೆರಳಲಿದ್ದಾರೆ. ಇದೇ ಕಾರಣಕ್ಕಾಗಿ ಗುರುವಾರ ನಡೆಯಬೇಕಿದ್ದ ಸಂಪುಟ ಸಭೆಯನ್ನು ಅಕ್ಟೋಬರ್ 28ಕ್ಕೆ ಮುಂದೂಡಲಾಗಿದೆ.

ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ, ಈ ಲೋಕಸಭಾ ಸ್ಥಾನವನ್ನು ತೆರವು ಮಾಡಿ, ತಮ್ಮ ಸಹೋದರಿಗೆ ಬಿಟ್ಟುಕೊಟ್ಟಿದ್ದಾರೆ. ಪ್ರಿಯಾಂಕಾ ಗಾಂಧಿ ನಾಮಪತ್ರ ಸಲ್ಲಿಕೆ ಹಾಗೂ ರೋಡ್ ಶೋ ಕಾರ್ಯಕ್ರಮಕ್ಕೆ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಕಾಂಗ್ರೆಸ್ ಆಡಳಿತ ರಾಜ್ಯಗಳ ಮುಖ್ಯಮಂತ್ರಿಗಳು ಪಾಲ್ಗೊಳ್ಳಲಿದ್ದಾರೆ.

# ಡಿಜಿಟಲ್ ಜೀವಂತ ಪ್ರಮಾಣ ಪತ್ರಕ್ಕೆ ಅಭಿಯಾನ

ನವದೆಹಲಿ, ಅ. 22 - ಡಿಜಿಟಲ್ ಜೀವಂತ ಪ್ರಮಾಣಪತ್ರ ಸಲ್ಲಿಸಲು ಉತ್ತೇಜನ ನೀಡುವ ಸಲುವಾಗಿ ನವೆಂಬರ್ ತಿಂಗಳಿನಲ್ಲಿ ಅಭಿಯಾನ ನಡೆಸಲಾಗುವುದು ಎಂದು ಕೇಂದ್ರ ಸರ್ಕಾರದ ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ. ಪಿಂಚಣಿದಾರರು ಪ್ರತಿ ವರ್ಷ ನವಂಬರ್ ತಿಂಗಳಲ್ಲಿ ಜೀವಂತ ಪ್ರಮಾಣ ಪತ್ರ ಸಲ್ಲಿಸಬೇಕಿದೆ. ಡಿಜಿಟಲ್ ಮೂಲಕ ಈ ಪ್ರಮಾಣ ಪತ್ರ ಸಲ್ಲಿಸಲು ದೇಶಾದ್ಯಂತ ಅಭಿಯಾನ ನಡೆಸಲಾಗುವುದು ಎಂದು ಕೇಂದ್ರ ಪಿಂಚಣಿ ಹಾಗೂ ಪಿಂಚಣಿದಾರರ ಅಭಿವೃದ್ಧಿ ಇಲಾಖೆ ತಿಳಿಸಿದೆ.

# ಮಳೆ ಅಬ್ಬರಕ್ಕೆ ಸಿಲುಕಿ ಐವರ ಸಾವು

ಬೆಂಗಳೂರು, ಅ. 22 - ನಗರದಲ್ಲಿ ಮಳೆ ಸಂಬಂಧ ನಡೆದ ಪ್ರತ್ಯೇಕ ಘಟನೆಗಳಲ್ಲಿ ಐವರು ಸಾವನ್ನಪ್ಪಿದ್ದಾರೆ. ಕಳೆದ ಮೂರು ದಿನಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ಮಳೆ ಸುರಿಯುತ್ತಿರುವುದರಿಂದ ಹಲವೆಡೆ ವಸತಿ ಪ್ರದೇಶಗಳಿಗೆ ನೀರು ನುಗ್ಗಿದೆ ಹಾಗೂ ರಸ್ತೆಗಳು ನದಿಗಳಂತಾಗಿವೆ.

ಧಾರಾಕಾರ ಮಳೆಯಿಂದಾಗಿ ಕಟ್ಟಡವೊಂದು ಕುಸಿದು ಮೂವರು ಕಾರ್ಮಿಕರು ಸಾವನ್ನಪ್ಪಿದ್ದಾರೆ. ಕಟ್ಟಡದ ಅವಶೇಷಗಳಿಂದ 14 ಜನರನ್ನು ರಕ್ಷಿಸಲಾಗಿದೆ. ಇನ್ನೂ ಒಬ್ಬರು ಅವಶೇಷಗಳಡಿ ಸಿಲುಕಿರುವ ಸಾಧ್ಯತೆ ಇದೆ. ಕೆಂಗೇರಿ ಕೆರೆಯಲ್ಲಿ ಸಿಲುಕಿದ ಇಬ್ಬರು ಮಕ್ಕಳು ಸಾವನ್ನಪ್ಪಿದ್ದಾರೆ.

ಜಲಾವೃತಗೊಂಡ ಪ್ರದೇಶಗಳಿಂದ ಜನರನ್ನು ತೆರವುಗೊಳಿಸಲು ಎನ್.ಡಿ.ಆರ್.ಎಫ್. ಹಾಗೂ ಎಸ್.ಡಿ.ಆರ್.ಎಫ್.ಗಳ 5 ತಂಡಗಳನ್ನು ನಿಯೋಜಿಸಲಾಗಿದೆ.

ಯಲಹಂಕದಲ್ಲಿ ಮಳೆಯ ಆರ್ಭಟ ಅತಿ ಹೆಚ್ಚಾಗಿದೆ. ಮಧ್ಯರಾತ್ರಿಯಿಂದ ಬೆಳಗಿನ ಜಾವದವರೆಗೆ ಈ ಭಾಗದಲ್ಲಿ 157 ಮಿ.ಮೀ. ಮಳೆ ಸುರಿದಿದೆ. ಯಲಹಂಕದ ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್ ಪ್ರದೇಶ ನದಿಯಂತಾಗಿದ್ದು, ಇಲ್ಲಿ ಸೊಂಟ ಮಟ್ಟದ ನೀರು ನಿಂತಿತ್ತು.

ಮಳೆಯಿಂದಾಗಿ ರಸ್ತೆಗಳು ಜಲಾವೃತವಾಗಿರುವ ನಡುವೆ, ರಸ್ತೆ ಗುಂಡಿಗಳಿಂದ ಜನರು ಬೇಸತ್ತಿದ್ದಾರೆ. ಇದು ಸರ್ಕಾರದ ವಿರುದ್ಧ ಟೀಕೆಗೂ ಕಾರಣವಾಗಿದೆ.

ಈ ನಡುವೆ ಹೇಳಿಕೆ ನೀಡಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ದುಬೈ ಹಾಗೂ ದೆಹಲಿಗಳಲ್ಲಿ ಏನಾಗುತ್ತಿದೆ ಎಂಬುದನ್ನು ನೀವು ಮಾಧ್ಯಮಗಳ ಮೂಲಕ ಗಮನಿಸಿರುತ್ತೀರಿ. ದೆಹಲಿಯಲ್ಲಿ ಮಾಲಿನ್ಯ ಉಂಟಾಗಿದೆ ಹಾಗೂ ಬರಪೀಡಿತ ದುಬೈನಲ್ಲಿ ಮಳೆಯಾಗುತ್ತಿದೆ. ದೇಶದ ಹಲವು ಭಾಗಗಳಲ್ಲಿ ಇದೇ ಪರಿಸ್ಥಿತಿ ಇದೆ. ನಾವು ಪರಿಸ್ಥಿತಿ ನಿಭಾಯಿಸುತ್ತಿದ್ದೇವೆ ಎಂದಿದ್ದಾರೆ.

ಬೆಂಗಳೂರಿನ ಕೆರೆಗಳ ಸಮೀಪ ಇರುವ ಹಲವಾರು ಮನೆಗಳು, ಜಲಾವೃತಗೊಂಡಿವೆ. ವಾಹನ ಹಾಗೂ ಎಲೆಕ್ಟ್ರಾನಿಕ್ ಉಪಕರಣಗಳಿಗೆ ಹಾನಿಯಾಗಿದೆ. ಜಲಾವೃತಗೊಂಡ ಪ್ರದೇಶಗಳಲ್ಲಿ ಕೆಲವು ಸ್ಥಳೀಯರು ಮೀನು ಹಿಡಿಯುತ್ತಿದ್ದ ದೃಶ್ಯ ಸಹ ಕಂಡು ಬಂದಿದೆ.

ಹಲವಾರು ಪ್ರಮುಖ ರಸ್ತೆಗಳಲ್ಲಿ ಸಂಚಾರ ಅಸ್ತವ್ಯಸ್ತವಾಗಿತ್ತು. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಂಪರ್ಕಿಸುವ ಬಳ್ಳಾರಿ ರಸ್ತೆಯಲ್ಲಿ ಸಮಸ್ಯೆ ತೀವ್ರವಾಗಿತ್ತು.

# ಹರಪನಹಳ್ಳಿ ಉತ್ಸವದಲ್ಲಿ ಗಮನ ಸೆಳೆದ ಚಿರಂತನ ಸಂಸ್ಥೆಯ ದಸರಾ ಸಂಭ್ರಮ



ಹರಪನಹಳ್ಳಿ, ಅ. 22 - ಇಲ್ಲಿನ ನೃತ್ಯ ವಿಶ್ವ ವಿದ್ಯಾಲಯದ ಟ್ರಸ್ಟ್ ವತಿಯಿಂದ ಈ ಬಾರಿ ದಸರಾ ಸಂಭ್ರಮ ಗಮನ ಸೆಳೆಯಿತು.

ಎಂ.ಪಿ. ರವೀಂದ್ರ ಪ್ರತಿಷ್ಠಾನದ ವತಿಯಿಂದ ಹಾಲಿ ಶಾಸಕಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಕಾರ್ಯಕ್ರಮದ ರೂವಾರಿಗಳಾಗಿದ್ದರು.

ಹರಪನಹಳ್ಳಿ ಕ್ಷೇತ್ರದ ನಿಚ್ಚವ್ವನಹಳ್ಳಿಯಿಂದ ಪ್ರಾರಂಭವಾಗಿ ಬಾಗಳಿ, ಕಡತಿ, ಕೆ. ಕಲ್ಲಹಳ್ಳಿ, ಹಾರಕನಾಳು, ಚಿಗಟೇರಿ, ಬೆಂಡಿಗೇರಿ, ಹಿರೇಮೇಗಳಗೆರೆ, ಹಲವಾಗಲು ಮತ್ತು ಉಜ್ಜಯಿನಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು.

ದಾವಣಗೆರೆ ನೃತ್ಯ ಕಲಾ ಅಧ್ಯಕ್ಷ ರಾಜಶೇಖರ್ ಸಕ್ಕಟ್ಟು, ನೃತ್ಯ ವಿದುಷಿ ರಕ್ಷಾ ರಾಜಶೇಖರ್ ಕಾರ್ಯಕ್ರಮ ಸಂಯೋಜಿಸಿದರು. ಚಿರಂತನ ಅಕಾಡೆಮಿಯ ಅಧ್ಯಕ್ಷೆ ದೀಪಾ ರಾವ್ ತಂಡ, ಅನುಶ್ರೀ ಬಳಗದ ವೀಣಾ ಹೆಗಡೆ ತಂಡ ಮತ್ತು ಉದಯ ಶಂಕರ್ ನಿರೂಪಿಸಿದರು.

# ಬಿಎಸ್ಸೆನ್ನೆಲ್: ಉಚಿತ ವೈಫೈ , ರೋಮಿಂಗ್ ಸೌಲಭ್ಯ

ದಾವಣಗೆರೆ, ಅ.22- ಬಿಎಸ್ಸೆನ್ನೆಲ್ ಚಿತ್ರದುರ್ಗ ಟೆಲಿಕಾಂ ಜಿಲ್ಲೆ, ಬಿಎಸ್ಸೆನ್ನೆಲ್‌ನ ಯಾವುದೇ ಹಾಟ್ ಸ್ಪಾಟ್ ವಲಯಗಳಲ್ಲಿ ನಿಮ್ಮ ಎಫ್‌ಟಿಟಿಹೆಚ್ ಖಾತೆಯನ್ನು ಬಳಸಿಕೊಂಡು ರೋಮಿಂಗ್ ಮಾಡುವಾಗ ಭಾರತದಾದ್ಯಂತ ಹೆಚ್ಚುವರಿ ಶುಲ್ಕಗಳಿಲ್ಲದೆ ಬಿಎಸ್ಸೆನ್ನೆಲ್ ವೈಫೈ ರೋಮಿಂಗ್ ಸೌಲಭ್ಯವನ್ನು ಪರಿಚಯಿಸುತ್ತಿದೆ. ಈ ಸೇವೆಯು ಯಾವುದೇ ಹೆಚ್ಚುವರಿ ಶುಲ್ಕಗಳಿಲ್ಲದೆ ಉಚಿತವಾಗಿ http://portal.bsnl.in//ftth/wifiroaming ನಲ್ಲಿ ನೋಂದಣಿ ಮಾಡಬಹುದೆಂದು ಬಿಎಸ್ಸೆನ್ನೆಲ್ ಡಿಜಿಎಂ ತಿಳಿಸಿದ್ದಾರೆ.

# ಎಲ್ಲಾ ಜಿಲ್ಲೆಗಳಲ್ಲೂ ಸರ್ಕಾರಿ ವೈದ್ಯ ಕಾಲೇಜು ತೆರೆಯಲು ಆಗ್ರಹ

ದಾವಣಗೆರೆ, ಅ. 22- ರಾಜ್ಯ ಸರ್ಕಾರ ವೈದ್ಯಕೀಯ ಕಾಲೇಜುಗಳನ್ನು ಹೊಂದಿರದ ರಾಜ್ಯದ 11 ಜಿಲ್ಲೆಗಳಲ್ಲಿ ಪಿಪಿಪಿ ಮಾದರಿಯಲ್ಲಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಹೊರಟಿದೆ. ಅಂದರೆ ಸರ್ಕಾರಿ ಹಾಗೂ ಖಾಸಗಿಯವರ ತಲಾ ಶೇ. 50 ರ ಸಹಭಾಗಿತ್ವದಲ್ಲಿ ಈ ಕಾಲೇಜುಗಳನ್ನು ಪ್ರಾರಂಭಿಸಲು ಯೋಜನೆ ರೂಪಿಸುತ್ತಿರುವ ಬಗ್ಗೆ ಎಐಡಿಎಸ್‌ಓ ಅಸಮಾಧಾನ ವ್ಯಕ್ತಪಡಿಸಿದೆ ಎಂದು ಜಿಲ್ಲಾ ಕಾರ್ಯದರ್ಶಿ ಟಿ.ಎಸ್. ಸುಮನ್ ತಿಳಿಸಿದ್ದಾರೆ.

ಪ್ರತಿ ಜಿಲ್ಲೆಯಲ್ಲಿರುವ ಬಡ ವಿದ್ಯಾರ್ಥಿಗಳಿಗೆ ಮೆಡಿಕಲ್ ಓದುವ ಅವಕಾಶ ನೀಡಬೇಕೆಂದು ಈ ಯೋಜನೆ ಮಾಡುತ್ತಿರುವುದಾಗಿ ಸರ್ಕಾರ ಹೇಳುತ್ತಿದೆ. ಆದರೆ ಈಗಾಗಲೇ ಸಂಪೂರ್ಣವಾಗಿ ಸರಕಾರದ ಅಡಿಯಲ್ಲಿರುವ ಕಾಲೇಜುಗಳ ಫೀಸ್ ಗಳೇ ಗಗನಕ್ಕೇರಿದ್ದು, ಇನ್ನು ಖಾಸಗಿ ಸಹಭಾಗಿತ್ವದಿಂದ ಹೇಗೆ ಬಡ ವಿದ್ಯಾರ್ಥಿಗಳಿಗೆ ಮೆಡಿಕಲ್ ಶಿಕ್ಷಣ ಸಿಗಲು ಸಾಧ್ಯ? ಎಂದು ಪ್ರಶ್ನಿಸಿದ್ದಾರೆ.

ಈಗಾಗಲೇ ದಕ್ಷಿಣ ಕನ್ನಡ, ದಾವಣಗೆರೆ ಸೇರಿದಂತೆ ಅನೇಕ ಜಿಲ್ಲೆಗಳಲ್ಲಿ ಬಹುಕಾಲದಿಂದ ಸರ್ಕಾರಿ ವೈದ್ಯಕೀಯ ಕಾಲೇಜು ಬೇಕು ಎಂಬ ಜನರ ಬೇಡಿಕೆ ಇದೆ. ಈ ನಿತೀಯ ಮೂಲಕ ಪಿಪಿಪಿ ಮಾದರಿಯಲ್ಲಿ ಮೆಡಿಕಲ್ ಕಾಲೇಜು ಪ್ರಾರಂಭಿಸಿದ್ದೇ ಆದರೆ ಜನ ಸರ್ಕಾರದಿಂದ ವಂಚಿತರಾಗುತ್ತಾರೆ. ಸರ್ಕಾರ ಖಾಸಗಿಯವರ ಲಾಭಿಗೆ ಶರಣಾಗಿರುವುದನ್ನು ಇದು ತೋರಿಸುತ್ತದೆ ಕಿಡಿಕಾರಿದ್ದಾರೆ.

ಕೂಡಲೇ ಈ ನಿರ್ಧಾರ ಕೈಬಿಟ್ಟು ಸರ್ಕಾರವೇ ಶಿಕ್ಷಣದ ಸಂಪೂರ್ಣ ಜವಾಬ್ದಾರಿ ವಹಿಸಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸರಕಾರಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಬೇಕೆಂದು ಎಐಡಿಎಸ್‌ಓ ಆಗ್ರಹಿಸುತ್ತದೆ.

# ಮೈಸೂರು ದಸರಾದಲ್ಲಿ ನಮನ ಅಕಾಡೆಮಿ ನೃತ್ಯ ರೂಪಕ



ದಾವಣಗೆರೆ, ಅ.22- ಮೈಸೂರು ದಸರಾ ಉತ್ಸವ-2024 ರಲ್ಲಿ ನಗರದ ನಮನ ಅಕಾಡೆಮಿ ನವರಾತ್ರಿಯ 9 ದಿನಗಳಂದು ದುರ್ಗಾದೇವಿ ವಿವಿಧ ರೂಪಗಳನ್ನು ಧಾರಣೆ ಮಾಡಿ ಅನೇಕ ದುಷ್ಟ ರಾಕ್ಷಸರನ್ನು ಸಂಹಾರ ಮಾಡಿದ ನವದುರ್ಗೆಯರ 9 ಅವತಾರಗಳ ವೈಶಿಷ್ಟತೆ ಬಗ್ಗೆ ನೃತ್ಯ ರೂಪಕ 'ನವಶಕ್ತಿ ನಮನ' ಪ್ರಸ್ತುತಪಡಿಸಿದರು. ನಮನ ಅಕಾಡೆಮಿಯ ಗುರು ವಿದುಷಿ ಶ್ರೀಮತಿ ಮಾಧವಿ ಡಿ ಕೆ ಹಾಗೂ ಅವರ 16 ಜನ ಶಿಷ್ಯಂದಿರು ಈ ನೃತ್ಯ ರೂಪದಲ್ಲಿ ಪಾಲ್ಗೊಂಡು ಪ್ರೇಕ್ಷಕರ ಮೆಚ್ಚುಗೆ ಗಳಿಸಿದರು.

# ರಿಲೈಯನ್ಸ್ – ಡಿಸ್ನಿ ವಿಲೀನ ಆದೇಶ ಪ್ರಕಟ

ನವದೆಹಲಿ, ಅ. 22 - ರಿಲೈಯನ್ಸ್ ಇಂಡಸ್ಟ್ರೀಸ್ ಹಾಗೂ ವಾಲ್ಟ್ ಡಿಸ್ನಿ ಆಸ್ತಿಗಳ ವಿಲೀನಕ್ಕಾಗಿ ಭಾರತೀಯ ಸ್ಪರ್ಧಾ ಆಯೋಗ 48 ಪುಟಗಳ ವಿವರವಾದ ಆದೇಶ ಪ್ರಕಟಿಸಿದೆ. ಐ.ಪಿ.ಎಲ್., ಐ.ಸಿ.ಸಿ. ಹಾಗೂ ಬಿ.ಸಿ.ಸಿ.ಐ. ಕ್ರಿಕೆಟ್ ಹಕ್ಕುಗಳನ್ನು ಈಗಿರುವ ಅವಧಿ ಮುಗಿಯುವವರೆಗೂ ವಿಲೀನಗೊಳಿಸುವುದಿಲ್ಲ ಎಂದು ಎರಡೂ ಕಂಪನಿಗಳು ತಿಳಿಸಿದ್ದವು. ಕಳೆದ ಆಗಸ್ಟ್ 28ರಂದು ಸ್ಪರ್ಧಾ ಆಯೋಗವು ಎರಡೂ ಕಂಪನಿಗಳ ವಿಲೀನಕ್ಕೆ ಒಪ್ಪಿಗೆ ನೀಡಿತ್ತು. ಇದರಿಂದಾಗಿ ದೇಶದಲ್ಲಿ 70 ಸಾವಿರ ಕೋಟಿ ರೂ. ಮೌಲ್ಯದ ಬೃಹತ್ ಮಾಧ್ಯಮ ಸಂಸ್ಥೆ ಸೃಷ್ಟಿಯಾಗಲಿದೆ.


# ಅಭಿನಂದನೆಗಳು



## ಡಾ. ಉದಯಶಂಕರ್ ಒಡೆಯರ್

### ಎಫ್‌ಆರ್‌ಸಿಎಸ್, ಕಾಸ್ಮೆಟಿಕ್/ಪ್ಲಾಸ್ಟಿಕ್ ಸರ್ಜನ್

ಭಾರತದಲ್ಲೇ ಹೆಸರಾಂತ ಮತ್ತು ಕರ್ನಾಟಕದ ಮೊಟ್ಟಮೊದಲ ಹಾಗೂ ಪ್ರತಿಷ್ಠಿತ ಮೈಸೂರು ವೈದ್ಯಕೀಯ ಮಹಾವಿದ್ಯಾಲಯದ ಹೆಮ್ಮೆಯ ಪದವೀಧರರಾಗಿದ್ದು, ವೈದ್ಯಕೀಯ ರಂಗಕ್ಕೆ ತಮ್ಮ ಅಪೂರ್ವ ಕೊಡುಗೆ, ವೈದ್ಯಕೀಯ ಕ್ಷೇತ್ರದ ಅಭಿವೃದ್ಧಿಗೆ ತಾವು ಪಟ್ಟ ಪರಿಶ್ರಮ, ಆರೋಗ್ಯ ವಂಚಿತರ ಸಮಸ್ಯೆಗಳಿಗೆ ತಾವು ಸ್ಪಂದಿಸಿದ ರೀತಿ ಮತ್ತು ಸಾಮಾಜಿಕ ಬದ್ಧತೆಯನ್ನು ಗುರುತಿಸಿ, ದಿನಾಂಕ : 27.10.2024 ರಂದು "ವಿಶಿಷ್ಟ ಸೇವಾ ಪುರಸ್ಕಾರ", ಗೌರವಾದರಗಳನ್ನು ನೀಡಿ ವೈದ್ಯಕೀಯ ಕ್ಷೇತ್ರ ಮತ್ತು ಸಮಾಜದಲ್ಲಿ ತಮ್ಮನ್ನು ಗಣ್ಯವ್ಯಕ್ತಿಗಳೆಂದು ಪರಿಗಣಿಸಿ, ವೈದ್ಯ ರತ್ನಾಕರ, ಅಶ್ವಿನಿಕುಮಾರ, ದೈವಾಂಶ ಸಂಭೂತ, ಧನ್ವಂತರೀ ಸ್ವರೂಪಿಗಳೂ ಆದ ನಿಮಗೆ ನಮ್ಮ ಹೃದಯಪೂರ್ವಕ ಅಭಿನಂದನೆಗಳು.

ದಿ|| ಚೆನ್ನಯ್ಯ ಒಡೆಯರ್ ಕುಟುಂಬ ವರ್ಗ, ಬಿಳಿಚೋಡು.
ದಾವಣಗೆರೆ ಜಿಲ್ಲಾ ಪ್ರದೇಶ ಕುರುಬರ ಸಂಘ, ದಾವಣಗೆರೆ.
ಶ್ರೀ ಬೀರೇಶ್ವರ ವಿದ್ಯಾವರ್ಧಕ ಸಂಘ, ದಾವಣಗೆರೆ.


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas